(ಗೊಂದಲ)

ಶ್ರೀ ಸಿದ್ದರಾಮಯ್ಯ : ಡಾ: ನಂಜುಂಡಪ್ಪನವರ ವರದಿಯ ಬಗ್ಗೆ ದುಡ್ಡನ್ನು ಕೊಟ್ಟಿಲ್ಲ, 19,000 ಕೋಟಿ ರೂಪಾಯಿಗಳು ಖರ್ಚಾಗಿದೆ. ಅದರ ಒಳಗಡೆಯೇ ಎಲ್ಲವನ್ನೂ ಮಾಡುತ್ತಿದ್ದಾರೆ. ಇದನ್ನು ನಾನು ತೀವ್ರವಾಗಿ ವಿರೋಧ ಮಾಡಿ ನಾನು ತಾವು ಇಷ್ಟು ಹೊತ್ತು ಮಾತನಾಡುವುದಕ್ಕೆ ಸಮಯ ಕೊಟ್ಟಿರುವುದಕ್ಕೆ ನಿಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕು.

(ಗೊಂದಲ)

(ಕೆಲವು ಮಾನ್ಯ ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿ ಮಾಡಿದರು)

(ಗೊಂದಲ)

ಅಧ್ಯಕ್ಷರು : ಇಲ್ಲ, ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ, ಈಗ ನಾನು ತಮಗೆ ಅವಕಾಶ ಕೊಡುವುದಿಲ್ಲ, No, No, ನೀವು ನಿಮ್ಮ ಸ್ಥಳಗಳಿಗೆ ಹೋಗಿ, ನಾನು ಬೆಳಿಗ್ಗೆ ಹೇಳಿದ್ದೇನೆ, ನೀವು ದಿನಾಂಕ: 9-07-2009 ರಿಂದ ಮಾತನಾಡುತ್ತಿದ್ದೀರಿ ಈಗ ಆಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು) : ಶ್ರೀ ವಿ.ಮುನಿಯಪ್ಪನವರಿಗೆ, ದಿನೇಶ್ ಗುಂಡೂರಾವ್‌ರವರಿಗೆ, ಪಿ.ಎಂ. ಅಶೋಕರವರಿಗೆ, ಡಾ: ಎ.ಬಿ.ಮಾಲಕರೆಡ್ಡಿಯವರಿಗೆ, ಹೆಚ್.ಡಿ.ರೇವಣ್ಣ ನವರಿಗೆ, ಸಿದ್ದರಾಮಯ್ಯನವರಿಗೆ, ಇವತ್ತು 8 ಜನ ಸದಸ್ಯರು ಮಾತನಾಡಿದ್ದಾರೆ. ಅವರೆಲ್ಲರಿಗೂ ಸಹ ನಾನು ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ.

(ಗೊಂದಲ)

(ಈ ಹಂತದಲ್ಲಿ ಜೆ.ಡಿ.ಎಸ್.ಮತ್ತು ಕಾಂಗ್ರೆಸ್‌ನ ಕೆಲವು ಶಾಸಕರು ಬಾವಿಗಿಳಿದು ಧರಣಿ ಮಾಡುತ್ತಾ ಒಟ್ಟಿಗೆ ಮಾತನಾಡುತ್ತಿದ್ದರು.)

(ಗೊಂದಲ)

ಅಧ್ಯಕ್ಷರು : ಇಲ್ಲ, ಇದು ಸರಿಯಲ್ಲ, ನೀವು ಮಾಡುತ್ತಿರುವುದು ಸದನದ ಗೌರವಕ್ಕೆ ಚ್ಯುತಿ ಬಂದಂತಾಗುತ್ತದೆ, ಮುಖ್ಯಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ನೀವು ಹೀಗೆ ಧರಣಿ ಮಾಡುತ್ತಿರುವುದು ಸರಿಯಲ್ಲ. ನಿಮ್ಮ ಸ್ಥಾನಗಳಿಗೆ ದಯಮಾಡಿ ಹಿಂತಿರುಗಿ.

(ಗೊಂದಲ)

ಅಧ್ಯಕ್ಷರು : ಇಲ್ಲ, ಸಾಧ್ಯವಿಲ್ಲ, ನಿಮಗೆ ಮಾತನಾಡಲಿಕ್ಕೆ ಅವಕಾಶ ಕೊಡುವುದಿಲ್ಲ. ಅವರು ಉತ್ತರ ಕೊಟ್ಟ ಮೇಲೆ ಸ್ಪಷ್ಟೀಕರಣ ಕೇಳಿ. ಆಗ ಮಾತನಾಡಿ, ಈಗ ಆಗುವುದಿಲ್ಲ, ದಯಮಾಡಿ ತಮ್ಮ ಸ್ಥಾನಗಳಿಗೆ ಹೋಗಿ.

ಮುಖ್ಯಮಂತ್ರಿಗಳಿಂದ ಉತ್ತರ

ಶ್ರೀ ಬಿ.ಎಸ್.ಯಡಿಯೂರಪ್ಪ : ವಿಧಾನ ಮಂಡಲದ ಅಧಿವೇಶನ ಎಂದರೆ ನಾಡಿನ ಜನತೆ ಕುತೂಹಲದಿಂದ ಮಹದಾಸೆಯಿಂದ ಅಪಾರ ನಿರೀಕ್ಷೆಯೊಂದಿಗೆ ಸದನದ ಕಲಾಪಗಳತ್ತ ದೃಷ್ಟಿ ಹರಿಸುತ್ತಿದ್ದಾರೆ. ಅದರಲ್ಲೂ ಬಜೆಟ್ ಅಧಿವೇಶನವೆಂದರೆ ವಿವಿಧ ಇಲಾಖೆಗಳ ಬೇಡಿಕೆಗಳ ಮೇಲೆ ಚರ್ಚೆ, ಮತ್ತಿತರ ವಿತ್ತೀಯ ಕಾರ್ಯಕಲಾಪಗಳ ಬಗ್ಗೆ ತೀವ್ರತರ ಕುತೂಹಲ ಹಾಗೂ ವಿಶೇಷ ಗಮನ ಹರಿಸಿ ನಾಡಿನಲ್ಲಿ ಶಾಂತಿಯನ್ನು ಕಾಪಾಡುವ ಬಗ್ಗೆ, ಸಂಪನ್ಮೂಲಗಳ ಕ್ರೋಢೀಕರಣ, ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ.

(ಗೊಂದಲ)

ಅಧ್ಯಕ್ಷರು : ಈ ರೀತಿ ಮಾಡುವುದು ಸರಿಯಲ್ಲ, ಹೋಗಿ ನಿಮ್ಮ ಸ್ಥಾನಕ್ಕೆ ಹೋಗಿ, ಪ್ಲೀಸ್, ಈ ರೀತಿ ವರ್ತನೆ ಮಾಡುವುದು ಸರಿಯಲ್ಲ, ದಯವಿಟ್ಟು ನಿಮ್ಮ ಸ್ಥಳಕ್ಕೆ ಹೋಗಿ, ನೀವು ಈ ರೀತಿ ಹಠ ಮಾಡಬಾರದು. ಪ್ಲೀಸ್,

(ಗೊಂದಲ)

ಅಧ್ಯಕ್ಷರು : ಈ ರೀತಿ ವರ್ತನೆ ಮಾಡುವುದು ಸರಿಯಲ್ಲ. ಪ್ಲೀಸ್. ಆಮೇಲೆ ಅವಕಾಶ ಕೊಡುತ್ತೇನೆ. ಈಗ ನಿಮ್ಮ ಸ್ಥಾನಗಳಿಗೆ ಹೋಗಿ. ನೀವು ಈ ರೀತಿ ಹಠ ಮಾಡಬಾರದು, ಪ್ಲೀಸ್.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಗಂಭೀರ ಅರ್ಥಪೂರ್ಣ ಮತ್ತು ಉಪಯುಕ್ತ ಚರ್ಚೆಯನ್ನು ಜನ ಎದುರು ನೋಡುತ್ತಿದ್ದಾರೆ. ಸಮಾವೇಶಗೊಂಡಿ ರುವಂಥ ಸದನದ ಪ್ರತಿ ಕ್ಷಣ ಅಮೋಘ ಸಮಯವನ್ನು ಅಪವ್ಯಯ ಮಾಡದಂತೆ ರಚನಾತ್ಮಕ ಸಲಹೆಗಳು ಮತ್ತು ಚಿಂತನೆ, ಮಂಥನ ಈ ಸದನದ ವೇದಿಕೆಯಲ್ಲಿ ನಡೆಯಬೇಕು....

ಅಧ್ಯಕ್ಷರು : ನಿಮ್ಮ ನಾಯಕರುಗಳಿಗೆ ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇನೆ, ಅವರು ಮಾತನಾಡಿದ್ದಾರೆ. ನಿಮಗೆ ಅವಕಾಶ

ಬೇಕಾಗಿದ್ದರೆ ನಿಮ್ಮ ಪಕ್ಷದ ವತಿಯಿಂದ ಕಳುಹಿಸಬೇಕಾಗಿತ್ತು. ನಿಯಮ 96ರಲ್ಲಿ ಎಲ್ಲದರಲ್ಲಿಯೂ ಮಾತನಾಡಲಿಕ್ಕೆ ನಿಮಗೆ ಅವಕಾಶ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಈ ಚರ್ಚೆಗಳಲ್ಲಿ ಶಾಸಕರು ತಲ್ಲೀನರಾಗಿ ತಮ್ಮ ಅಭಿಪ್ರಾಯಗಳನ್ನು ನೀಡುವುದರ ಜೊತೆಗೆ ರಚನಾತ್ಮಕವಾದ ಟೀಕೆ ಟಿಪ್ಪಣಿಗಳನ್ನು ಮಾಡುವುದಕ್ಕೆ ಅಧಿವೇಶನ ವೇದಿಕೆ ಒದಗಿಸುತ್ತದೆ. ಇದಕ್ಕೆ ಅವಕಾಶ ಕಲ್ಪಿಸಿಕೊಡುವಂಥದ್ದು ಸರ್ಕಾರದ ಕರ್ತವ್ಯ.

(ಗೊಂದಲ)

ಅಧ್ಯಕ್ಷರು : ಇಲ್ಲ, ಇಲ್ಲ, ಆಗುವುದಿಲ್ಲ, ಎಲ್ಲರಿಗೂ ಅವಕಾಶ ಕೊಟ್ಟಿದ್ದೇನೆ ನೀವು ಉತ್ತರದ ನಂತರ ಸ್ಪಷ್ಟೀಕರಣ ಕೇಳಿ.

(ಗೊಂದಲ)

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಹೈದರಾಬಾದ್ ಕರ್ನಾಟಕದವರಿಗೆ ಒಬ್ಬರಿಗಾದರೂ ಅವಕಾಶ ಕೊಡಿ.

ಅಧ್ಯಕ್ಷರು : ಆಗುವುದಿಲ್ಲ, ಈಗ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ತಮ್ಮ ಸಲಹೆಗಳನ್ನು ಅಭಿವ್ಯಕ್ತಗೊಳಿಸುವಂಥದ್ದು ಈ ಸದನದ ಸದಸ್ಯರ ಹಕ್ಕು ಕೂಡ ಆಗಿರುತ್ತದೆ. ಜುಲೈ 9 ರಿಂದ ಪ್ರಾರಂಭವಾದ ಪ್ರಸಕ್ತ ಅಧಿವೇಶನದ ಕಾರ್ಯಕಲಾಪಗಳನ್ನು ಗಮನಿಸುತ್ತಿರುವಂಥ ನಾಡಿನ ಜನತೆ ನಿರಾಶರಾಗಿದ್ದಾರೆ.

(ಗೊಂದಲ)

ಅಧ್ಯಕ್ಷರು : ಇಲ್ಲ, ಮುಖ್ಯಮಂತ್ರಿಗಳು ಉತ್ತರ ಪ್ರಾರಂಭಿಸಿದ್ದಾರೆ. ಈಗ ಅವಕಾಶವನ್ನು ಕೊಡುವುದಿಲ್ಲ. ಅವರು ಉತ್ತರ ಕೊಟ್ಟ ಮೇಲೆ ನೀವೇ ಮಾತನಾಡಿ. ಅವರು ಉತ್ತರ ಕೊಟ್ಟ ಮೇಲೆ ನೀವೇ ಮೊದಲು ಮಾತನಾಡಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಇದಕ್ಕೆ ಆಶ್ಚರ್ಯಪಡಬೇಕಾಗಿಲ್ಲ. ಈ ಭಾವ ನಮ್ಮೆಲ್ಲರನ್ನು ಆವರಿಸಿದೆ, ಇದಕ್ಕೆ ಕಾರಣರು ಯಾರು? ಇಂದಿನ ಬೆಳವಣಿಗೆಯ ಬಗ್ಗೆ ಮತ್ತೆ ಪ್ರಸ್ತಾಪಿಸುವುದಕ್ಕೆ ನಾನು ಬಯಸುವುದಿಲ್ಲ. ಸದನದ ಕಾರ್ಯಕಲಾಪಗಳಲ್ಲಿ ಗಂಭೀರ ಪ್ರಶ್ನೆಗಳಿಗೆ ಈ ಅಧಿವೇಶನದ ವೇಳೆಯಲ್ಲಿ ಸಿಂಹಪಾಲು ದೊರಕಬೇಕಾಗಿತ್ತು ಆದರೆ ಹಾಗಾಗಲಿಲ್ಲ

ಎನ್ನುವುದು ಅತ್ಯಂತ ನೋವು ತರುವಂಥ ಸಂಗತಿ. ಇವತ್ತು ಗಮನ ಸೆಳೆಯುವಂಥ ಸೂಚನೆಗಳು, ನಿಲುವಳಿ ಸೂಚನೆಗಳು, ಇವೇ ಮೊದಲಾದ ಚರ್ಚೆಗಳಲ್ಲಿ ಹಾಗೂ ಅದಕ್ಕೆ ಸಿಕ್ಕ ಉತ್ತರವನ್ನು..

ಅಧ್ಯಕ್ಷರು : ನಿಮ್ಮ ನಾಯಕರಿಗೆ ಹೋಗಿ ಹೇಳಿ. ಮುಖ್ಯಮಂತ್ರಿಗಳು ಮಾತನಾಡುವಾಗ ಈ ರೀತಿ ತಾವು ಹಠ ಮಾಡಬಾರದು, ಈ ರೀತಿ ಮಾಡುವುದು ಒಳ್ಳೆಯ ಸಂಪ್ರದಾಯವಲ್ಲ, ಮುಖ್ಯಮಂತ್ರಿಗಳು ಮಾತನಾಡುವಾಗ ಈ ರೀತಿ ಮಾಡುವುದು ನಿಮಗೆ ಗೌರವವಲ್ಲ. ದಯವಿಟ್ಟು ತಾವು ತಮ್ಮ ಸ್ಥಾನಗಳಿಗೆ ಹೋಗಿ. ಸ್ಪಷ್ಟೀಕರಣಕ್ಕೆ ನಿಮಗೆ ಅವಕಾಶ ಮಾಡಿಕೊಡುತ್ತೇನೆ. ನಿಮ್ಮ ನಾಯಕರುಗಳಿಗೆ ಹೇಳಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಚರ್ಚೆಗಳಲ್ಲಿ ಅನೇಕ ವಿಚಾರಗಳು, ಮೊದಲಾದ ಗಂಭೀರವಾದಂಥ ವಿಚಾರಗಳ ಬಗ್ಗೆ ಚರ್ಚೆಯಾಗಬೇಕಾಗಿತ್ತು. ವಿವಿಧ ಇಲಾಖೆಗಳ ಬೇಡಿಕೆಗಳ ಬಗ್ಗೆ ಚರ್ಚೆಗೆ ಸರಿಯಾದ ಅವಕಾಶ ಆಗಲಿಲ್ಲವೆನ್ನುವಂಥದ್ದು ನನ್ನ ಮನಸ್ಸಿಗೂ ಸಹ ನೋವಿದೆ. ಆದ್ದರಿಂದ ಸನ್ಮಾನ್ಯ ಅಧ್ಯಕ್ಷರೆ, ಬರುವಂಥ ದಿವಸಗಳಲ್ಲಿ ಹೆಚ್ಚು ದಿವಸ ಸದನದ ಕಾರ್ಯಕಲಾಪವನ್ನು ನಡೆಸುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ. ಇವತ್ತು ಒಂದು ಒಪ್ಪಂದವಾಗಿ ಪ್ರತಿಪಕ್ಷಗಳು 7.00 ಗಂಟೆಗೆ ಚರ್ಚೆಯನ್ನು ಮುಗಿಸಿ ನಂತರ ಕ್ಲಾರಿಫಿಕೇಶನ್‌ಗೆ ಅವಕಾಶ ಕೊಡುತ್ತೇವೆಂದು ಹೇಳಿದ ಮೇಲೂ ಸಹ ಇವತ್ತು ಈ ರೀತಿ ಬಾವಿಗೆ ಬಂದು ಕಾರ್ಯಕಲಾಪಗಳನ್ನು ತಡೆಯುವಂಥದ್ದು ಏನು ನಡೆಯುತ್ತಿದೆ ಇದು ಪ್ರಜಾತಂತ್ರ ವ್ಯವಸ್ಥೆಗೆ ಶೋಭೆ ತರುವಂಥದ್ದಲ್ಲ. ಒಂದು ಸಾರಿ ಬಿ.ಎ.ಸಿ.ಯಲ್ಲಿ ಚರ್ಚೆಯಾಗಿ ನಿಮ್ಮ ಸಹಮತ ವ್ಯಕ್ತಪಡಿಸಿ ಈ ರೀತಿ ಮಾತನಾಡುವುದು ಯಾರಿಗೂ ಗೌರವ ತರುವಂಥದ್ದಲ್ಲ, ದಯಮಾಡಿ ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ, ಈಗಾಗಲೇ ಒಪ್ಪಂದವಾದಂತೆ ಕಾರ್ಯಕಲಾಪಗಳನ್ನು ನಡೆಯು ವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು ಎಂದು ಹೇಳಿ ನಾನು ವಿನಂತಿಯನ್ನು ಮಾಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ನೀವು ಈ ರೀತಿ ಮಾಡುತ್ತಿರುವುದು ಏಕೆಂದು ನನಗೆ ಅರ್ಥ ಆಗುತ್ತಿಲ್ಲ, ತಾವು ತಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಿ. ನಾನು Clarification ಗೆ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಅಧಿವೇಶನ ಪ್ರಾರಂಭವಾದಾಗಿನಿಂದ ಇವತ್ತಿನವರೆಗೂ ಇದೇ ರೀತಿ ಅಡ್ಡಿ ಆತಂಕಗಳನ್ನು ಮಾಡುವಂಥದ್ದು ಯಾರಿಗೂ ಶೋಭೆ ತರುವಂಥದ್ದಲ್ಲ, ನಾವು ಹೇಳಿದ್ದೆವು, ರಾತ್ರಿ 8–10.00 ಗಂಟೆಯವರೆಗೂ ಬೇಕಾದರೆ ಸದನದ ಕಾರ್ಯಕಲಾಪಗಳು ನಡೆಯಲಿ, ನಾವು ಸಹಕಾರ ಕೊಡುತ್ತೇವೆಂದು ಹೇಳಿದ ಮೇಲೂ ಸಹ ಈ ರೀತಿ ಅಡ್ಡಿ ಆತಂಕಗಳನ್ನು ಮಾಡುವುದರ ಮೂಲಕ ಇವತ್ತು ಈ ರೀತಿಯ ಪರಿಸ್ಥಿತಿ ತಂದಿರುವುದು ಯಾರಿಗೂ ಶೋಭೆ ತರುವಂಥದ್ದಲ್ಲ.

(ಗೊಂದಲ)

ಅಧ್ಯಕ್ಷರು : ಈ ರೀತಿ ಮಾಡುವುದು ಸರಿಯಲ್ಲ, everyday ನಿಯಮ 69ರಲ್ಲಿ ಅನೇಕ ವಿಷಯಗಳು ಚರ್ಚೆಯಾಗಿವೆ, ಸದನವನ್ನು ನಡೆಸಿದವರು ಯಾರು? ಇಲ್ಲಿ ಚರ್ಚೆ ಮಾಡಿದ್ದು ಯಾವ ವಿಷಯ? ಪದೇ ಪದೇ ಏನು ಮಾತನಾಡುತ್ತೀರಿ, ನಾನು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇನೆ. ದಯವಿಟ್ಟು ನಿಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಅಧ್ಯಕ್ಷರ ಮಾತನ್ನು ಕೇಳಿ, ಸುಮ್ಮನೆ ಕುಸ್ತಿ ಮಾಡಲಿಕ್ಕೆ ಬರುತ್ತಿರುವಿರಾ? ಅವರ ರೂಲಿಂಗ್ ಮೇಲೆ ನಿಮಗೆ ಗೌರವವಿಲ್ಲವೇ? ಈ ರೀತಿ ನಡೆದುಕೊಂಡರೆ ಯಾರು ನಿಮಗೆ ಉತ್ತರ ಕೊಡುತ್ತಾರೆ? ಯಾರು ಇದನ್ನೆಲ್ಲಾ ನಿಮಗೆ ಹೇಳಿಕೊಡುತ್ತಾರೋ? ಈ ರೀತಿ ಮಾಡಿದರೆ ಕಾರ್ಯಕಲಾಪ ನಡೆಸುವುದಾದರೂ ಹೇಗೆ? ಇದು ನಿಮಗೆ ಗೌರವ ತರುವಂಥದ್ದಲ್ಲ. ಇಷ್ಟು ವರ್ಷ ಆಡಳಿತ ಪಕ್ಷದಲ್ಲಿದ್ದಿರಿ, ಇದೇ ರೀತಿ ನಡೆಯುತ್ತಿತ್ತೇ? ಈ ರೀತಿ ಮಾಡುವುದರಿಂದ ಯಾರಿಗೂ ಗೌರವ ತರುವಂಥದ್ದಲ್ಲ. ಅಧ್ಯಕ್ಷರ ಮೇಲೆ ಕುಸ್ತಿ ಮಾಡಲಿಕ್ಕೆ ಬಂದಿದ್ದೀರಾ? ವಿರೋಧ ಪಕ್ಷದ ನಾಯಕರು ಹೇಳಿದ ಮೇಲೂ ಸಹ ತಾವು ಈ ರೀತಿ ಮಾಡುವುದು ಸರಿಯಲ್ಲ, ನೀವು ಈ ರೀತಿ ವರ್ತಿಸಿದರೆ ನಾವೇನು ಮಾಡಲಿಕ್ಕಾಗುತ್ತದೆ? ನನ್ನ ಕೆಲಸವಲ್ಲ ಇದು, ನಿಮ್ಮ ಕೆಲಸ.

ಅಧ್ಯಕ್ಷರು : ತಾವು ಈ ರೀತಿ ಮಾಡುವುದು ಒಳ್ಳೆಯದಲ್ಲ, ನಾನು ಎಲ್ಲಿಯೂ ನೋಡಿಲ್ಲ ಈ ರೀತಿ, ವಿನಂತಿ ಮಾಡಿಕೊಂಡರೂ ನಿಮಗೆ ಅರ್ಥವಾಗುತ್ತಿಲ್ಲ, ಇದು ಒಳ್ಳೆಯದಲ್ಲ, ಸ್ಪಷ್ಟೀಕರಣಕ್ಕೆ ಅವಕಾಶ ಕೊಡುತ್ತೇನೆಂದು ಹೇಳುತ್ತಿದ್ದೇನೆ, ಇದರಿಂದ ಯಾರಿಗೂ ಗೌರವ ಬರುವುದಿಲ್ಲ. ಸದನದ ಘನತೆ ಉಳಿಯುವುದಿಲ್ಲ. ನಿಮ್ಮ ನಾಯಕರಿಗೆ ಕೇಳಿ. ಇದು

ಒಳ್ಳೆಯದಲ್ಲ, This is too much. ಹತ್ತು ಜನ ಬಂದು ಎಲ್ಲರೂ ಒಟ್ಟಿಗೆ ಮಾತನಾಡುತ್ತೀರಿ, ಎಲ್ಲರಿಗೂ ಕೊಡಬೇಕೆಂದರೆ ಹೇಗೆ? ಆಮೇಲೆ ಸ್ಪಷ್ಟೀಕರಣಕ್ಕೆ ಅವಕಾಶ ಕೊಡುತ್ತೇನೆಂದರೆ ನೀವು ಕೇಳುತ್ತಿಲ್ಲ. ನೀವು ನಿಮ್ಮ ಸ್ಥಾನಗಳಿಗೆ ಹೋಗಿ, ಈ ರೀತಿ ಪದೇ ಪದೇ ಮಾಡುತ್ತಿರುವುದು ಸರಿಯಲ್ಲ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಈ ರೀತಿ ಅಧ್ಯಕ್ಷರ ಬಳಿ ಬಂದು ಕುಸ್ತಿ ಮಾಡುವುದು ಸರಿಯೇ ನಿಮಗೆ? ಇದನ್ನು ಕುಸ್ತಿ ಅಖಾಡ ಎಂದು ಭಾವಿಸಿದ್ದೀರಾ? ನಾವು ಆ ರೀತಿ ಮಾಡಲಿಕ್ಕೆ ಬಿಡುವುದಿಲ್ಲ. ಇವತ್ತು ಈ ಸದನಕ್ಕೆ ಒಂದು ಘನತೆ ಗಾಂಭೀರ್ಯತೆ ಇದೆ, ಗೌರವ ಇದೆ, ಸತ್ಸಂಪ್ರದಾಯಗಳಿವೆ, ಆ ಎಲ್ಲಾ ಸತ್ಸಂಪ್ರದಾಯಗಳನ್ನು ಗಾಳಿಗೆ ತೂರಿ ಈ ರೀತಿ ಮಾಡಿದರೆ ಹೇಗೆ? ತಾವು ಮೂರು ಗಂಟೆಗೆ ಮುಗಿಸುತ್ತೇವೆಂದು ಒಪ್ಪಂದ ಆದಮೇಲೂ ಸಹ ಈ ರೀತಿ ಬಾವಿಗೆ ಬಂದರೆ ಇಷ್ಟು ವರ್ಷಗಳ ಕಾಲ ನೀವು ಆಡಳಿತ ನಡೆಸಿ ಏನು ಪಾಠ ಕಲಿತ ಹಾಗಾಯಿತು? ನಿಮ್ಮನ್ನು ನೋಡಿ ಯಾರು ಮಾರ್ಗದರ್ಶನ ಕಲಿಯಬೇಕು? ಯಾರಿಗೂ ಇದು ಶೋಭೆ ತರುವಂಥದ್ದಲ್ಲ, ಎಷ್ಟರಮಟ್ಟಿಗೆ ಸರಿ ನೀವು ನಡೆದುಕೊಳ್ಳುವಂಥ ರೀತಿ?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ನಿಮಗೆ ಅವಕಾಶ ದೊರೆತಾಗ ಚರ್ಚೆ ಮಾಡಲಿಲ್ಲ, ಈಗ ಬಾವಿಗಿಳಿದು ಅಡ್ಡಿ ಮಾಡುವುದು ಯಾರಿಗೆ ಶೋಭೆ ತರುತ್ತದೆ?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಅಧ್ಯಕ್ಷರೆ, ಇವರೆಲ್ಲಾ ಬಾವಿಯಲ್ಲಿ ನಿಂತು ಕೂಗುತ್ತಿದ್ದಾರೆ, ಇದು ಎಷ್ಟರಮಟ್ಟಿಗೆ ಸರಿ? ನಿಮಗೆ ಇವರು ಕೊಡುವ ಗೌರವ, ಮರ್ಯಾದೆ ಇದೇನಾ? ಎಲ್ಲರೂ ಬಂದು ಚೀರುತ್ತೀರಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಬಿಲ್‌ಗಳನ್ನು ಪಾಸ್ ಮಾಡಿಕೊಡಿ, ಇವರು ಉತ್ತರ ಹೇಳುವುದಕ್ಕೆ ಬಿಡುತ್ತಿಲ್ಲ. ಬಿಲ್‌ಗಳನ್ನು ತೆಗೆದುಕೊಳ್ಳಿ. ಈ ರಾಜ್ಯದ ಜನತೆಗೆ ಇವರ ನಡವಳಿಕೆ ಏನು ಎಂದು ಗೊತ್ತಾಗಲಿ. ಪ್ರತಿಪಕ್ಷದ ಸದಸ್ಯರ ವರ್ತನೆ ಏನು ಎಂದು ಗೊತ್ತಾಗಲಿ. ಇದನ್ನು ಕುಸ್ತಿ ಅಖಾಡ ಮಾಡಿಕೊಂಡಿದ್ದೀರಾ ನೀವು? ಹೇಳುವವರು,

ಕೇಳುವವರು ನಿಮಗೆ ಇಲ್ಲಿ ಯಾರು ಇಲ್ಲವೇ? ಪ್ರತಿಪಕ್ಷದ ನಾಯಕರು ಹೇಳಿದ ಮೇಲೂ ಅವರಿಗೆ ಗೌರವ ಕೊಡುವಂಥ ನಡವಳಿಕೆ ಇಲ್ಲವೇ?

(ಗೊಂದಲ)

ಅಧ್ಯಕ್ಷರು : ಐದು ನಿಮಿಷ ಅವಕಾಶ ಕೊಟ್ಟರೆ ಹೈದರಾಬಾದ್ ಕರ್ನಾಟಕದ ಎಲ್ಲಾ ಸಮಸ್ಯೆಗಳು ಬಗೆಹರಿಯುತ್ತವೆಯೇ?

(ಗೊಂದಲ)

ಅಧ್ಯಕ್ಷರು : ಯಾವಾಗಲೂ ನಿಯಮ 69. ಬೆಳಿಗ್ಗೆ ಪ್ರಾರಂಭವಾದರೆ.., ಸಂಜೆಯವರಿಗೂ ಅದನ್ನೇ ಚರ್ಚೆ ಮಾಡುತ್ತಿದ್ದೀರಿ. ಈಗ ನಾನು ಯಾರಿಗೂ ಮಾತನಾಡಲಿಕ್ಕೆ ಅವಕಾಶ ಕೊಡುವುದಿಲ್ಲವೆಂದು ಬೆಳಿಗ್ಗೆಯೇ ಹೇಳಿದ್ದೆನು. ಮತ್ತೂ ಅದೇ ಹಠ ಮಾಡುತ್ತಿದ್ದೀರಿ. ಇದು ಒಳ್ಳೆಯದಲ್ಲ, ಇದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು : ಯಾರಿಗೂ ಅವಕಾಶ ಇಲ್ಲವೆಂದು ನಾನು ಬೆಳಿಗ್ಗೆ ಹೇಳಿದ್ದೇನೆ, ಆದರೂ ನೀವು ಹಠ ಮಾಡುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು : ಇದು ಸರಿಯಲ್ಲ. ಐದು ನಿಮಿಷ ಮಾತನಾಡಿಬಿಟ್ಟರೆ ಐದಾರು ವರ್ಷದ ಹೈದರಾಬಾದ್ ಕರ್ನಾಟಕದ ಸಮಸ್ಯೆಗಳು ಪರಿಹಾರ ಆಗಿಬಿಡುತ್ತದೆಯೇ? ಇಷ್ಟು ವರ್ಷ ನೀವು ಮಾತನಾಡಿಲ್ಲವೇ? ಹೈದರಾಬಾದ್ ಕರ್ನಾಟಕದ ಬಗ್ಗೆ ಮಾತನಾಡಲಿಕ್ಕೆ ನಿಮಗೆ ಯಾವತ್ತೂ ಅವಕಾಶ ಸಿಗಲಿಲ್ಲವೇ? ಈಗ ಮಾತನಾಡಿಬಿಟ್ಟರೆ ನಿಮ್ಮ ಎಲ್ಲಾ ಸಮಸ್ಯೆ ಬಗೆಹರಿದು ಬಿಡುತ್ತದೆಯೇ? ಸರ್ಕಾರ ಪರವಾಗಿ ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ, ಈ ರೀತಿ ಬಾವಿಗೆ ಬಂದು ಧರಣಿ ಮಾಡುವುದು ಸರಿಯಲ್ಲ. ತಾವು ಬೆಳಿಗಿನಿಂದ ಮಾತನಾಡಿದ್ದೀರಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಾನು ಏನು ಮಾತನಾಡಬೇಕೆಂದುಕೊಂಡಿದ್ದೆ ಅದನ್ನೆಲ್ಲಾ ಲಿಖಿತ ಮೂಲಕ ತಮಗೆ ಕೊಡುತ್ತಿದ್ದೇನೆ, ಅದನ್ನು ಈ ಸದನ ನಡವಳಿಕೆಗಳಲ್ಲಿ ದಾಖಲು ಮಾಡುವುದು. ನಾನು ಓದುವ ಉತ್ತರ ಪ್ರತಿಗಳನ್ನು ಮಾಧ್ಯಮಗಳಿಗೂ ಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಲಿಖಿತ ರೂಪದಲ್ಲಿ ಕೊಟ್ಟಿರುವ ಉತ್ತರದ ಪ್ರತಿಗಳನ್ನು ಸದನದ ನಡವಳಿಕೆಗಳಲ್ಲಿ ದಾಖಲಿಸುವುದು.

(ಗೊಂದಲ)

ಅಧ್ಯಕ್ಷರು : ಬೆಳಿಗ್ಗೆಯಿಂದ ಎಲ್ಲಾ ಸದಸ್ಯರು ಮಾತನಾಡಿ ಈಗ ಕೆಲವು ಸದಸ್ಯರಿಗೆ ಐದು ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಡಲಿಲ್ಲವೆಂದು ಬಾವಿಗೆ ಬರುವುದೆಂದರೆ ಇವರ ನಡವಳಿಕೆ ನನಗೆ ಅರ್ಥವಾಗುತ್ತಿಲ್ಲ. ಆಮೇಲೆ ಸ್ಪಷ್ಟೀಕರಣಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿದರೂ ತಾವು ಕೇಳುತ್ತಿಲ್ಲ. ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ನೀವು ಬಾವಿಗೆ ಬಂದು ಸದನದ ಗೌರವಕ್ಕೆ ಧಕ್ಕೆ ತಂದಿದ್ದೀರಿ, ಇದರಿಂದ ಸದನಕ್ಕೆ ಗೌರವ ಬರುವುದಿಲ್ಲ.

(ಗೊಂದಲ)

1. ಈ ವರ್ಷದ ಆಯವ್ಯಯದ ಚರ್ಚೆ ಮತ್ತು ಅನುಮೋದನೆಗೆ ಕರೆಯಲಾದ ಈ ಅಧಿವೇಶನದಲ್ಲಿ ಕಳೆದ 20 ದಿನಗಳಿಂದ ಬಜೆಟ್ ವಿಷಯಗಳ ಮೇಲೆ ಆಳವಾದ ಚರ್ಚೆಯಾಗದಿರುವುದನ್ನು ತಾವು ಗಮನಿಸಿದ್ದೀರಿ. ಕೇವಲ ಪ್ರತಿಪಕ್ಷದ ಸದಸ್ಯರಲ್ಲದೆ ನಮ್ಮ ಪಕ್ಷದ ಸದಸ್ಯರೂ ಹಲವಾರು ವಿಷಯಗಳ ಬಗ್ಗೆ, ಅವರ ಕ್ಷೇತ್ರ ಮತ್ತು ಜಿಲ್ಲೆಗಳ ಅಭಿವೃದ್ಧಿಯ ಬಗ್ಗೆ ಕೂಲಂಕುಷವಾಗಿ ಚರ್ಚೆ ಮಾಡಲು ಆಸಕ್ತಿ ಹೊಂದಿದ್ದರು.
2. ಪ್ರಥಮ ಬಾರಿಗೆ ಆಯ್ಕೆಯಾಗಿ ಬಂದ ಸದಸ್ಯರಂತೂ ಹಲವು ವಿಷಯಗಳ ಬಗ್ಗೆ ದೀರ್ಘ ಅಧ್ಯಯನ ಮಾಡಿ ಈ ಸದನದ ಮೂಲಕ ಸರ್ಕಾರಕ್ಕೆ ತಮ್ಮ ಚಿಂತನೆಗಳು ಮತ್ತು ಉಪಯುಕ್ತ ಸಲಹೆಗಳನ್ನು ನೀಡಬಯಸಿದ್ದರು. ಅದು ಅವರ ಹಕ್ಕೂ ಕೂಡ.
3. ಆದರೆ ಈ ಸದನದಲ್ಲಿ ಅವರಿಗೂ ಕೂಡ ಆಯವ್ಯಯದ ಮೇಲಿನ ಚರ್ಚೆಗೆ ಅವಕಾಶ ಸಿಗದಿರುವುದು ಅವರನ್ನು ನಿರಾಸೆಗೊಳಿಸಿರುವು ದರಲ್ಲಿ ಸಂದೇಹವಿಲ್ಲ.
4. ಈ ಸದನದಲ್ಲಿ ಬೇರೆ ತುರ್ತು ವಿಷಯಗಳನ್ನು ಅಥವಾ ಸಾರ್ವಜನಿಕ ಮಹತ್ವದ ವಿಷಯಗಳನ್ನು ಚರ್ಚೆ ಮಾಡಬಾರದೆಂದು ನಾನು ಹೇಳುತ್ತಿಲ್ಲ. ಪ್ರಜಾಪ್ರಭುತ್ವದಲ್ಲಿ ಈ ಸದನದ ನಿಯಮಗಳ ಅನ್ವಯ ಅಂತಹ ವಿಷಯಗಳ ಬಗ್ಗೆ ಚರ್ಚೆ ಅತ್ಯಗತ್ಯ.

5. ಸರ್ಕಾರದ ಗಮನವನ್ನು ತುರ್ತು ಮತ್ತು ಮಹತ್ವದ ವಿಷಯಗಳ ಬಗ್ಗೆ ಸೆಳೆಯುವುದರ ಜೊತೆಗೆ, ಎಲ್ಲಿಯಾದರೂ ಸರ್ಕಾರ ಲೋಪವೆಸಗಿದಲ್ಲಿ ಅದರ ಬಗ್ಗೆ ಸಹ ಬೇರೆ ಬೇರೆ ರೂಪದಲ್ಲಿ ಸದನದಲ್ಲಿ ಚರ್ಚೆ ಮಾಡಿ ಸರ್ಕಾರ ಲೋಪ ದೋಷಗಳನ್ನು ತಿದ್ದುಕೊಳ್ಳಲು ಮಾರ್ಗದರ್ಶನ ಮಾಡಬಹುದು.
6. ಆದರೆ ಜುಲೈ 9 ರಿಂದ ಮೊನ್ನೆಯವರೆಗೆ ಸದನದಲ್ಲಿ ಗಮನ ಸೆಳೆಯುವ ಸೂಚನೆ, ನಿಲುವಳಿ ಸೂಚನೆ, ಮತ್ತಿತರ ವಿಷಯಗಳ ಬಗ್ಗೆ ಚರ್ಚೆ ಹಾಗೂ ಈ ದಿಸೆಯಲ್ಲಿ ಸದನದ ಬಾವಿಗೆ ಬಂದು ನಡೆಸಿದ ಧರಣಿ, ಸರ್ಕಾರದ ವಿರುದ್ಧ ಧಿಕ್ಕಾರದ ಕೂಗಾಟ, ಸದನದಿಂದ ಹೊರನಡೆಯುವುದು ಮತ್ತು ಸದನದ ಹಠಾತ್ ಮುಂದೂಡಿಕೆಯಲ್ಲೇ ಬಹಳಷ್ಟು ವೇಳೆ ಕಳೆದು ಹೋಯಿತು.
7. ಇದಕ್ಕೆ ನಾನು ಕಾರಣಗಳನ್ನು ಹುಡುಕಲು ಹೋಗುತ್ತಿಲ್ಲ. ಆದರೆ ಯಾವುದೇ ಇಲಾಖೆಯ ಬೇಡಿಕೆಗಳ ಬಗ್ಗೆ ಸುದೀರ್ಘವಾದ ಮತ್ತು ಅರ್ಥಪೂರ್ಣ ಚರ್ಚೆ ಆಗಿಲ್ಲವೆಂಬುದನ್ನು ತಾವೂ ಸಹ ಒಪ್ಪುತ್ತೀರೆಂದು ನಂಬುತ್ತೇನೆ.
8. ಬಹಳಷ್ಟು ಜನ ಶಾಸಕರು ಈ ವಿಚಾರದಲ್ಲಿ ತಮ್ಮ ಅನಿಸಿಕೆಗಳನ್ನು ನನ್ನ ಜೊತೆ ಹಂಚಿಕೊಂಡಿರುತ್ತಾರೆ.
9. ಆದರೂ ಸಹ ಸರ್ಕಾರ ಕಳೆದ ಒಂದು ವರ್ಷದಲ್ಲಿ ಮಾಡಿದ ಸಾಧನೆ ಮತ್ತು ಯೋಜನೆಗಳ ಅನುಷ್ಠಾನದ ಅನುಭವದ ಆಧಾರದ ಮೇಲೆ ತಯಾರಿಸಿದ ನಮ್ಮ ಆಯವ್ಯಯದ ಬಗ್ಗೆ ಮತ್ತು ನಮ್ಮ ಮುಂದಿನ ಅಭಿವೃದ್ಧಿಯ ಚಿಂತನೆಗಳ ಬಗ್ಗೆ ಈ ಸದನದ ಮೂಲಕ ನಾಡಿನ ಆರು ಕೋಟಿ ಜನರಿಗೆ ತಿಳಿಸಬಯಸುತ್ತೇನೆ.

ಆರ್ಥಿಕ ಪರಿಸ್ಥಿತಿ ಮತ್ತು ನಿರ್ವಹಣೆ :

10. ಕಳೆದ ಒಂದೂವರೆ ವರ್ಷದಿಂದ ಜಗತ್ತಿನಾದ್ಯಂತ ಆರ್ಥಿಕ ಹಿನ್ನಡೆ ಯಾಗಿದ್ದು, ಅದರ ಬಿಸಿ ನಮ್ಮ ದೇಶದ ಮತ್ತು ನಮ್ಮ ರಾಜ್ಯದ ಆರ್ಥಿಕ ಸ್ಥಿತಿಗೂ ತಟ್ಟಿದೆ ಇದರಿಂದಾಗಿ ಕೇಂದ್ರ ಮತ್ತು ರಾಜ್ಯದ ಸಂಪನ್ಮೂಲಗಳ ಸಂಗ್ರಹದಲ್ಲಿ ಹಿನ್ನಡೆಯಾಗಿದೆ.
11. ಇದರಿಂದಾಗಿ, ಕೇಂದ್ರ ಮತ್ತು ರಾಜ್ಯಗಳ ವಿತ್ತೀಯ ಕೊರತೆ (ಫಿಸ್ಕಲ್ ಡೆಫಿಸಿಟ್) ಹೆಚ್ಚುತ್ತಿದೆ. ಕೇಂದ್ರದ ವಿತ್ತೀಯ ಕೊರತೆ ಶೇ.6 ರಿಂದ ಶೇ.68 ಕ್ಕೆ ಏರಿದ್ದು ಕೇಂದ್ರ ಸರ್ಕಾರವೇ ರಾಜ್ಯ ಸರ್ಕಾರಗಳಿಗೆ ಈ

ವರ್ಷ ವಿತ್ತೀಯ ಕೊರತೆಯ ಮಿತಿಯನ್ನು ಶೇ.3.5 ರಿಂದ ಶೇ.4 ಕ್ಕೆ ಏರಿಸಲು ಸಲಹೆ ನೀಡಿದೆ.

12. ಕೇಂದ್ರ ಸರ್ಕಾರ ತನ್ನ 10 ಲಕ್ಷ ಕೋಟಿ ಆಯವ್ಯಯದ ವೆಚ್ಚದಲ್ಲಿ 4 ಲಕ್ಷ ಕೋಟಿಗೂ ಮೀರಿ ಸಾಲ ಪಡೆಯಬೇಕಾದ ಪರಿಸ್ಥಿತಿಯನ್ನು ಕೇಂದ್ರ ಅರ್ಥ ಸಚಿವರು ವಿವರಿಸಿರುತ್ತಾರೆ.

13. ಹೀಗಿದ್ದರೂ ಸಹ ಈ ವರ್ಷದ ನಮ್ಮ ಆಯವ್ಯಯದಲ್ಲಿ ವಿತ್ತೀಯ ಕೊರತೆಯನ್ನು ಶೇ.3 ಕ್ಕಿಂತ ಕಡಿಮೆ ಮಿತಿಯಲ್ಲಿಡಲು ಯೋಜಿಸಲಾಗಿದೆ. ಒಂದು ವೇಳೆ ಆರ್ಥಿಕ ಹಿನ್ನಡೆಯಿಂದ ನಿರೀಕ್ಷಿತ ಮಟ್ಟದಲ್ಲಿ ತೆರಿಗೆಗಳ ಸಂಗ್ರಹವಾಗದಿದ್ದಲ್ಲಿ ಈ ವಿತ್ತೀಯ ಕೊರತೆಯನ್ನು ಶೇ.4 ಹೆಚ್ಚಿಸಲು ಅವಕಾಶವಿದೆ.

14. 2008–09ರಲ್ಲಿ ವಿತ್ತೀಯ ಕೊರತೆಯನ್ನು ಶೇ.3.5ಕ್ಕೆ ಹೆಚ್ಚಿಸಲು ಅವಕಾಶವಿದ್ದರೂ ಸಹ ನಾವು ಶೇ 3.29ಕ್ಕೆ ಮಿತಿಗೊಳಿಸಿದೆವು.

15. ಕಳೆದ 5 ವರ್ಷಗಳಿಂದ ರಾಜ್ಯದಲ್ಲಿ ರಾಜಸ್ವ ಕೊರತೆ ಇರುವುದಿಲ್ಲ. ಕಳೆದ ವರ್ಷ ರೂ.1,570 ಕೋಟಿ ರಾಜಸ್ವ ಹೆಚ್ಚಳವಾಗಿತ್ತು.

ಸಾಲಗಳ ಪ್ರಮಾಣ:

16. ಕೆಲವರು ನಾವು ಹೆಚ್ಚು ಸಾಲವನ್ನು ಮಾಡಿದ್ದೇವೆಂದು ಟೀಕೆ ಮಾಡಿರುತ್ತಾರೆ. ನಾವು 2008–09ಕ್ಕೆ ಹೊಸದಾಗಿ ಪಡೆದ ಸಾಲ ರೂ.6,878 ಕೋಟಿ. ಇದನ್ನೂ ಸೇರಿಸಿ ನಾವು ಈವರೆಗೆ ತೆಗೆದುಕೊಂಡ ಸಂಚಿತ ಸಾಲದ ಮೊತ್ತ ರೂ.66,419 ಕೋಟಿ. ಇದು ರಾಜ್ಯದ ಒಟ್ಟು ಆದಾಯದ ಶೇ.24.77 ರಷ್ಟಾಗಿದೆ. ಇದು ಕಳೆದ 7 ವರ್ಷಗಳಲ್ಲಿ ರಾಜ್ಯದ ಒಟ್ಟು ಆದಾಯದ ಅತ್ಯಂತ ಕಡಿಮೆ ಶೇಕಡವಾರು ಮಟ್ಟದಲ್ಲಿದೆ. ಈ ಹಿಂದೆ 2003–04ರಲ್ಲಿ ಒಟ್ಟು ಸಾಲಗಳ ಪ್ರಮಾಣ ರಾಜ್ಯದ ಆದಾಯದ ಶೇ.32.91 ಇತ್ತು.

ಬಡ್ಡಿ ಸಂದಾಯಃ

17. 2002–03ರಲ್ಲಿ ರಾಜ್ಯದ ಬಡ್ಡಿ ಸಂದಾಯದ ಪ್ರಮಾಣ ರಾಜಸ್ವ ಆದಾಯದ (Revenue Receipt) ಶೇ.20.36 ಇತ್ತು. ಇದನ್ನು 2008–09ರಲ್ಲಿ ಶೇ. 10.46ಕ್ಕೆ ಇಳಿಸಿದ್ದೇವೆ. ಕಳೆದ ವರ್ಷ ಬಡ್ಡಿ ಸಂದಾಯ ಮಾಡಿದ ಮೊತ್ತ ರೂ.4,532 ಕೋಟಿ.

18. ಸಧ್ಯದ ಪ್ರತಿಕೂಲ ಆರ್ಥಿಕ ಪರಿಸ್ಥಿತಿಯಲ್ಲಿಯೂ ರಾಜ್ಯ ಸರ್ಕಾರ ಆರ್ಥಿಕ ಶಿಸ್ತನ್ನು ಪಾಲಿಸಿದೆ. ಹಣಕಾಸಿನ ವ್ಯವಹಾರವನ್ನು ಸಮರ್ಥವಾಗಿ ನಿರ್ವಹಿಸಿದೆ. ವಿತ್ತೀಯ ಕೊರತೆ, ರಾಜಸ್ವ ಹೆಚ್ಚಳ, ಒಟ್ಟು ಸಾಲಗಳ ಮೊತ್ತ, ಸರ್ಕಾರಿ ಖಾತ್ರಿಗಳ ಮೊತ್ತ, ಇತ್ಯಾದಿ ಅಂಶಗಳು ವಿತ್ತೀಯ ಹೊಣೆಗಾರಿಕೆ ಮತ್ತು ಆಯವ್ಯಯ ನಿರ್ವಹಣೆ ಅಧಿನಿಯಮದ (Fiscal Responsibility and Budget Management Act) ಮಾನದಂಡಗಳ ಪ್ರಕಾರವೇ ಇವೆ.

19. ಇತರೆ ರಾಜ್ಯಗಳಿಗೆ ಹೋಲಿಸಿ ನೋಡಿದರೆ ನಮ್ಮ ರಾಜ್ಯದ ಆರ್ಥಿಕ ವ್ಯವಸ್ಥೆ ಮತ್ತು ನಿರ್ವಹಣೆ ಬಹಳ ಉತ್ತಮವಾಗಿದೆ. 2007–08 ರವರೆಗೂ ಸಹ ಕೆಲವು ರಾಜ್ಯಗಳ ವಿತ್ತೀಯ ಕೊರತೆ ಶೇ.3ಕ್ಕಿಂತ ಹೆಚ್ಚಾಗಿತ್ತು (ಉದಾ: ಪಶ್ಚಿಮ ಬಂಗಾಳ, ಪಂಜಾಬ್, ಕೇರಳ, ಇತ್ಯಾದಿ).

20. ಈ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರದ ವಿತ್ತೀಯ ಕೊರತೆ ರೂ.4 ಲಕ್ಷ ಕೋಟಿಗೆ ಹೋಲಿಸಿದರೆ ನಮ್ಮ ವಿತ್ತೀಯ ಕೊರತೆ ರೂ.8,493 ಕೋಟಿ ಮಾತ್ರ. ಇದು ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯ ಕೇವಲ ಶೇ.2.12 ಮಾತ್ರ. ನೆರೆಯ ರಾಜ್ಯಗಳಾದ ಆಂಧ್ರ ಪ್ರದೇಶದ ವಿತ್ತೀಯ ಕೊರತೆ ರೂ. 12,092 ಕೋಟಿ ಮತ್ತು ತಮಿಳುನಾಡಿನಲ್ಲಿ ರೂ.11,824 ಕೋಟಿಯಾಗಿದೆ.

21. 13ನೇ ಹಣಕಾಸಿನ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು ರಾಜ್ಯಕ್ಕೆ ಭೇಟಿ ನೀಡಿದ ಸಮಯದಲ್ಲಿ (ಜನವರಿ 2009) ನಮ್ಮ ರಾಜ್ಯದ ಆರ್ಥಿಕ ಶಿಸ್ತಿನ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ. ಇದೇ ರೀತಿ ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್‌ರವರು ಕಳೆದ ಮೇ ತಿಂಗಳಲ್ಲಿ ರಾಜ್ಯಕ್ಕೆ ಬಂದಾಗ ರಾಜ್ಯ ಸರ್ಕಾರದ ಆರ್ಥಿಕ ನಿರ್ವಹಣೆಯ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿರುತ್ತಾರೆ.

2008–09ನೇ ಸಾಲಿನ ವಿತ್ತೀಯ ಸಾಧನೆಗಳು:

22. 2008–09ನೇ ಸಾಲಿನ ಒಟ್ಟು ರೂ.52,382 ಕೋಟಿ ವೆಚ್ಚದಲ್ಲಿ ಬಂಡವಾಳ ವೆಚ್ಚ ರೂ.10,632 ಕೋಟಿ ಮತ್ತು ರಾಜಸ್ವ ವೆಚ್ಚ ರೂ.41,750 ಕೋಟಿಯಾಗಿತ್ತು. 2007–08ಕ್ಕೆ ಹೋಲಿಸಿದರೆ, ಒಟ್ಟು

ವೆಚ್ಚದಲ್ಲಿ ಶೇ. 12ರಷ್ಟು ಮತ್ತು ಬಂಡವಾಳ ವೆಚ್ಚದಲ್ಲಿ ಶೇ. 13 ರಷ್ಟು ಹೆಚ್ಚಳ ಸಾಧಿಸಲಾಗಿದೆ.

23. ಕಳೆದ ವರ್ಷ ಪ್ರಮುಖ ತೆರಿಗೆಗಳ (ವಾಣಿಜ್ಯ, ಅಬಕಾರಿ ಮತ್ತು ವಾಹನ ತೆರಿಗೆ) ಸಂಗ್ರಹ ರೂ.23,463 ಕೋಟಿಯಾಗಿದ್ದು ಇದು ಹಿಂದಿನ ವರ್ಷಕ್ಕಿಂತ ಶೇ.8.6 ಹೆಚ್ಚಾಗಿರುತ್ತದೆ. ರಿಯಲ್ ಎಸ್ಟೇಟ್ ವ್ಯವಹಾರ ಕುಂಠಿತವಾದ ಕಾರಣ, ನೋಂದಣಿ ಮತ್ತು ಮುದ್ರಾಂಕ ಆದಾಯದಲ್ಲಿ ಸುಮಾರು ಶೇ.10 ಕಡಿಮೆಯಾಗಿರುತ್ತದೆ. (2008–09ರ ಸಂಗ್ರಹ ರೂ.3,063 ಕೋಟಿ).

ಯೋಜನಾ ವೆಚ್ಚ:

24. 2008–09ನೇ ಸಾಲಿನಲ್ಲಿ ಯೋಜನಾ ವೆಚ್ಚ ರೂ.21,819 ಕೋಟಿ ಯಾಗಿದ್ದು ಇದು 2007–08ರ ಯೋಜನಾ ವೆಚ್ಚ ರೂ.17,227 ಕೋಟಿಗೆ ಹೋಲಿಸಿದರೆ ಶೇ.27 ರಷ್ಟು ಹೆಚ್ಚಾಗಿರುತ್ತದೆ.

25. ಆರ್ಥಿಕ ಹಿನ್ನಡೆಯಲ್ಲಿಯೂ ಸಹ ಯೋಜನಾ ವೆಚ್ಚವನ್ನು ಶೇ.27 ರಷ್ಟು ಹೆಚ್ಚಿಸಿರುವುದು ಒಂದು ಮೆಚ್ಚಬೇಕಾದ ಸಾಧನೆ ಎಂಬುದು ಆರ್ಥಿಕ ತಜ್ಞರ ಅಭಿಪ್ರಾಯ.

26. ಹೆಮ್ಮೆ ಪಡುವ ಒಂದು ವಿಷಯವೆಂದರೆ, ನಮ್ಮ ಯೋಜನೇತರ ವೆಚ್ಚದಲ್ಲಿ ಹಿಡಿತ ಸಾಧಿಸಿರುವುದು. ಹಿಂದಿನ 5 ವರ್ಷಗಳಲ್ಲಿ ಈ ಯೋಜನೇತರ ವೆಚ್ಚದ ಹೆಚ್ಚಳ ಶೇ.11.60ರಿಂದ ಶೆ.18.40 ರಷ್ಟು ಇತ್ತು. ಆದರೆ 2007–08ಕ್ಕೆ ಹೋಲಿಸಿದರೆ ಯೋಜನೇತರ ವೆಚ್ಚ 2008–09 ರಲ್ಲಿ ಸುಮಾರು 6 ಪ್ರತಿ ಶತದಷ್ಟು ಮಾತ್ರ ಹೆಚ್ಚಳವಾಗಿದೆ.

2009–10ರ ಸಾಲಿನ ಆಯವ್ಯಯದ ಅಂದಾಜುಗಳು :

27. 2009–10ನೇ ಸಾಲಿನಲ್ಲಿ ರೂ.47,237 ಕೋಟಿ ರಾಜಸ್ವ ವೆಚ್ಚ ಮತ್ತು ರೂ.11,622 ಕೋಟಿ ಬಂಡವಾಳ ವೆಚ್ಚ ಸೇರಿದಂತೆ ಒಟ್ಟು ರೂ.58,860 ಕೋಟಿ ವೆಚ್ಚ ಮಾಡಲು ಪ್ರಸ್ತಾಪಿಸಲಾಗಿದೆ. ಇದಲ್ಲದೆ ಸುಮಾರು ರೂ.1,740 ಕೋಟಿ ಪೂರಕ ಅಂದಾಜಿಗೂ ಸಹ ಈ ಸದನದ ಅನುಮೋದನೆ ಕೋರಲಾಗಿದೆ.

28. ಪೂರಕ ಅಂದಾಜಿನಲ್ಲಿ ಪ್ರಮುಖವಾಗಿ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿ (ರೂ.150 ಕೋಟಿ), ನಗರ ಸ್ಥಳೀಯ ಸಂಸ್ಥೆಗಳು (ರೂ. 150 ಕೋಟಿ). ಪಡಿತರ ಸಹಾಯಧನ (ರೂ. 117 ಕೋಟಿ), ಗ್ರಾಮೀಣ

ರಸ್ತೆಗಳು (ರೂ.77 ಕೋಟಿ), ಕೆ.ಪಿ.ಸಿ.ಎಲ್. (ರೂ.175 ಕೋಟಿ) ಹಾಗೂ ಇತರ ಅಭಿವೃದ್ಧಿ ಕಾರ್ಯಕ್ರಮಗಳು ಸೇರಿವೆ.

ಯೋಜನಾ ಗಾತ್ರ :

29. ಆರ್ಥಿಕ ತಜ್ಞರ ಪ್ರಕಾರ, ಆರ್ಥಿಕ ಹಿನ್ನಡೆಯ ಸಮಯದಲ್ಲಿ ಮೂಲಭೂತ ಸೌಲಭ್ಯಗಳ ಮೇಲಿನ ಬಂಡವಾಳ ಖರ್ಚು ಮತ್ತು ಇತರೆ ಸರ್ಕಾರಿ ಯೋಜನೆಗಳ ಮೇಲೆ ಹೆಚ್ಚು ಖರ್ಚು ಮಾಡುವುದರಿಂದ ಆರ್ಥಿಕ ಹಿನ್ನಡೆಯನ್ನು ತಡೆದು ಪುನಃಶ್ಚೇತನಗೊಳಿಸಲು ಸಾಧ್ಯವಾಗುತ್ತದೆ.

30. ಈ ಹಿನ್ನೆಲೆಯಲ್ಲಿ ಆರ್ಥಿಕ ಹಿನ್ನಡೆಯಿದ್ದರೂ ನಮ್ಮ ಸರ್ಕಾರ ಯೋಜನಾ ಗಾತ್ರವನ್ನು ರೂ.29,500 ಕೋಟಿಗೆ ಹೆಚ್ಚಿಸಿದೆ. ಇದು 2008–09ರ ಯೋಜನಾ ವೆಚ್ಚಕ್ಕೆ ಹೋಲಿಸಿದರೆ ಸುಮಾರು ಶೇ.35 ರಷ್ಟು ಹೆಚ್ಚಳವಾಗಿದೆ. ವಿವಿಧ ನಿಗಮಗಳು ಮತ್ತು ಪ್ರಾಧಿಕಾರಗಳು (ಕೆ.ಪಿ.ಸಿ.ಎಲ್., ಕೆ.ಐ.ಎ.ಡಿ.ಬಿ., ಕೆ.ಆರ್.ಡಿ.ಸಿ.ಎಲ್., ಬಿ.ಬಿ.ಎಂ.ಪಿ., ಬಿ.ಡಿ.ಎ.ಇತ್ಯಾದಿ) ಸ್ವಂತ ಸಂಪನ್ಮೂಲ ಹಾಗೂ ಇತರ ಮೂಲಗಳಿಂದ ಸುಮಾರು ರೂ.5000 ಕೋಟಿ ವೆಚ್ಚ ಮಾಡಲಿವೆ.

ಸಂಪನ್ಮೂಲ ಸಂಗ್ರಹಣೆ :

31. ವಿವಿಧ ತೆರಿಗೆಗಳ ಮೂಲಕ ಈ ವರ್ಷ ರೂ.32,721 ಕೋಟಿ ಸಂಗ್ರಹಿಸಲು ಯೋಜಿಸಲಾಗಿದೆ. ತೆರಿಗೆಯೇತರ ಆದಾಯ ಸುಮಾರು ರೂ.2,130 ಕೋಟಿ ಎಂದು ಅಂದಾಜಿಸಲಾಗಿದೆ.

32. ಸದ್ಯದ ಮಂದಗತಿಯ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ರಾಜ್ಯದ ತೆರಿಗೆ ಸಂಗ್ರಹಣೆಯಲ್ಲಿ ಅಂದಾಜಿಗಿಂತಲೂ ಕಡಿಮೆಯಾಗುವ ಸಂಭವವನ್ನು ತಳ್ಳಿಹಾಕುವಂತಿಲ್ಲ. ಆಯವ್ಯಯ ಭಾಷಣದಲ್ಲಿಯೂ ಈ ಬಗ್ಗೆ ಪ್ರಸ್ತಾಪಿಸಲಾಗಿದ್ದು ಈ ವರ್ಷದ ಉತ್ತರಾರ್ಧದಲ್ಲಿ ಆರ್ಥಿಕ ಪರಿಸ್ಥಿತಿಯು ಉತ್ತಮಗೊಳ್ಳುವ ಸಾಧ್ಯತೆ ಇದೆ. ಸದನದಲ್ಲಿ ಮುಂದೆ ಪ್ರಸ್ತುತಪಡಿಸುವ ಮಧ್ಯಮಾವಧಿ ವಿತ್ತೀಯ ಪರಿಶೀಲನೆಯಲ್ಲಿ ಈ ಬಗ್ಗೆ ಹೆಚ್ಚಿನ ವಿವರಗಳನ್ನು ನೀಡಲಾಗುವುದು.

ರಾಜಸ್ವದ ನಿರ್ವಹಣೆಗೆ ಮಾರ್ಗೋಪಾಯಗಳು :

33. ಆರ್ಥಿಕ ಹಿಂಜರಿತದಿಂದಾಗಿ ಸಂಪನ್ಮೂಲಗಳ ಸಂಗ್ರಹಣೆಯಲ್ಲಿ, ಪ್ರಮುಖವಾಗಿ ವಾಣಿಜ್ಯ ತೆರಿಗೆ ಮತ್ತು ಮುದ್ರಾಂಕ ಶುಲ್ಕದಲ್ಲಿ ಕುಂಠಿತವಾಗುವ ಸಾಧ್ಯತೆಯನ್ನು ಮನಗಂಡು ಸಂಪನ್ಮೂಲ ಕೊರತೆಯನ್ನು ನಿರ್ವಹಿಸಲು ಕೆಲವು ಕ್ರಮಗಳನ್ನು ಕೈಗೊಂಡಿದೆ.

34. ಅಬಕಾರಿ ಚಿಲ್ಲರೆ ಸನ್ನದುದಾರರಿಗೆ ಮಾರಾಟದ ಮೇಲೆ ಶೇ.20ರಷ್ಟು ಲಾಭಾಂಶವನ್ನು ಸಾರಾಯಿ ನಿಷೇಧ ನಂತರ ಭಾರತೀಯ ಮಧ್ಯಗಳ ಮಾರಾಟವು (IMFL) ಇಮ್ಮಡಿಯಾಗಿರುವುದರಿಂದ ಲಾಬಾಂಶವನ್ನು ಈ ವರ್ಷದಿಂದ ಶೇ.10 ಕ್ಕೆ ಇಳಿಸಲಾಗಿದೆ. ಇದರಿಂದ ಪ್ರತಿ ವರ್ಷ ಸುಮಾರು ರೂ. 750 ಕೋಟಿ ಹೆಚ್ಚಿನ ಆದಾಯ ನಿರೀಕ್ಷಿಸಿದೆ.

35. ಗ್ರಾಮೀಣ ಪ್ರದೇಶಗಳು ಮತ್ತು ಸಣ್ಣ ಪಟ್ಟಣಗಳಲ್ಲಿ ಅಬಕಾರಿ ಸನ್ನದು ಶುಲ್ಕವನ್ನು ಹೆಚ್ಚಿಸಲಾಗಿದ್ದು ಇದರಿಂದ ಸುಮಾರು ರೂ.25 ಕೋಟಿ ಆದಾಯ ಹೆಚ್ಚಲಿದೆ.

36. ಮಾರಾಟ ತೆರಿಗೆ ಸಂಗ್ರಹದಲ್ಲಿ ಹೆಚ್ಚಿನ ದಕ್ಷತೆಯನ್ನು ಮೂಡಿಸಲು ಎಲೆಕ್ಟ್ರಾನಿಕ್ ಯಂತ್ರಗಳ ಮೂಲಕ ವಹಿವಾಟಿನ ಮಾಹಿತಿ ಸಂಗ್ರಹಿಸುವ ವ್ಯವಸ್ಥೆಯನ್ನು ರೂಪಿಸಲಾಗುತ್ತಿದೆ.

37. ಕೇಂದ್ರ ಪುರಸ್ಕೃತ ಯೋಜನೆಗಳಡಿ (JNNURM, NREGA, AIBP, PMGSY, IAY ಇತ್ಯಾದಿ) ಕೇಂದ್ರದಿಂದ ಹೆಚ್ಚಿನ ಅನುದಾನ ಪಡೆಯಲು ಯತ್ನಿಸಲಾಗುವುದು.

38. ರಾಜ್ಯದ ಪ್ರಮುಖ ಮೂಲ ಸೌಕರ್ಯ ಯೋಜನೆಗಳನ್ನು ಖಾಸಗಿ ಸಹಭಾಗಿತ್ವದೊಡನೆ (PPP) ಅನುಷ್ಠಾನ ಮಾಡಲು ಯೋಜಿಸಲಾಗುವುದು.

39. ಯೋಜನೇತರ ಮತ್ತು ಅಭಿವೃದ್ಧಿಯೇತರ ವೆಚ್ಚವನ್ನು ನಿಯಂತ್ರಿಸಲು ಹೆಚ್ಚಿನ ಗಮನವನ್ನು ನೀಡಲಾಗುವುದು. ಈ ದಿಸೆಯಲ್ಲಿ ಸರ್ಕಾರ ವೆಚ್ಚ ಸುಧಾರಣಾ ಆಯೋಗ ರಚಿಸಿದೆ.

ಸಾಧನೆಯ ಒಂದು ವರ್ಷ – ವಿಕಾಸ ಸಂಕಲ್ಪ :

40. ನಾನು ಆಶ್ವಾಸನೆ ನೀಡಿದಂತೆ 100 ದಿನ 200 ದಿನ ಮತ್ತು ಒಂದು ವರ್ಷದ ನಂತರ ನಮ್ಮ ಸರ್ಕಾರದ ಸಾಧನೆಗಳನ್ನು ಜನರ ಮುಂದೆ ಇಟ್ಟಿದ್ದೇವೆ. ಒಂದು ವರ್ಷದ ಸಾಧನೆಯನ್ನು ವಿಕಾಸ ಸಂಕಲ್ಪ ಉತ್ಸವದ ಮೂಲಕ ರಾಜ್ಯದ 7 ಕಡೆ ಬಿಂಬಿಸಿರುತ್ತೇವೆ.

41. ಈ ಸಂದರ್ಭದಲ್ಲಿ ನಾಡಿನ ಜನತೆಗೆ ನಮ್ಮ ಪ್ರಗತಿಯ ವಿವರಗಳನ್ನು ನೀಡುವುದರ ಜೊತೆಗೆ ಸುಮಾರು ಒಂದು ಲಕ್ಷ ಫಲಾನುಭವಿಗಳಿಗೆ ನೇರವಾಗಿ ಸರ್ಕಾರದ ವಿವಿಧ ಯೋಜನೆಗಳ ಸೌಲಭ್ಯಗಳನ್ನು ನೀಡಿರುತ್ತೇವೆ.

42. ಈ ಒಂದು ವರ್ಷದಲ್ಲಿ ಸುಮಾರು 1.2 ಕೋಟಿ ಕುಟುಂಬಗಳಿಗೆ ಯಾವುದಾದರೊಂದು ರೂಪದಲ್ಲಿ ನಮ್ಮ ಯೋಜನೆಗಳ ಪ್ರಯೋಜನ ತಲುಪಿದೆ.

43. ಅನ್ನದಾತನ ಸಂಕಷ್ಟಗಳ ಪರಿಹಾರಕ್ಕಾಗಿ ಶೇ. 3ರ ದರದಲ್ಲಿ ಸಾಲ, ಪ್ರತಿ ಲೀಟರ್ ಹಾಲಿಗೆ ರೂ.2 ಪ್ರೋತ್ಸಾಹ ಧನ, ಒಣಭೂಮಿ ಆಶ್ರಿತ ರೈತರಿಗೆ ರೂ.1000 ಸಹಾಯಧನ, ಕೃಷಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್, ರೈತರ ವಿದೇಶಿ ಅಧ್ಯಯನ ಪ್ರವಾಸ, ಸಾವಯವ ಕೃಷಿಗೆ ಪ್ರೋತ್ಸಾಹ, ಇತ್ಯಾದಿ ನೂತನ ಕಾರ್ಯಕ್ರಮಗಳ ಮೂಲಕ ಕೃಷಿಕನ ಜೀವನವನ್ನು ಹಸನು ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ.

44. ಸಂಧ್ಯಾ, ಸುರಕ್ಷಾ, ಭಾಗ್ಯಲಕ್ಷ್ಮಿ, ಆರೋಗ್ಯ ಕವಚ, ಮಡಿಲು, ಅಂಗವಿಕಲರಿಗೆ ರೂ.1000 ಮಾಸಾಶನ, ಇತ್ಯಾದಿ ಹೊಸ ಜನಪರ ಯೋಜನೆಗಳ ಮುಖಾಂತರ ಬಡವರ ಬಾಳಲ್ಲಿ ಸ್ವಲ್ಪವಾದರೂ ಬೆಳಕು ತರಲು ಯತ್ನಿಸಿದ್ದೇವೆ.

45. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಶಿಕ್ಷಣ ಮತ್ತು ವಿದ್ಯಾರ್ಥಿ ನಿಲಯಗಳಿಗೆ ಅತಿ ಹೆಚ್ಚಿನ ನೆರವು ನೀಡಿದ್ದೇವೆ.

46. ಕೌಶಲ್ಯ ಆಯೋಗ ರಚಿಸಿ ಉದ್ಯೋಗ ಮೇಳದ ಮುಖಾಂತರ ಸುಮಾರು 58 ಸಾವಿರ ಮಂದಿ ನಿರುದ್ಯೋಗಿ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ. ಹಾಗೂ ಇನ್ನೂ ಸುಮಾರು 75 ಸಾವಿರ ಜನರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಲಾಗುತ್ತಿದೆ.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ :

47. ನಮ್ಮ ಸರ್ಕಾರ ಎಸ್.ಸಿ. / ಎಸ್.ಟಿ.ಗಳ ಅಭಿವೃದ್ಧಿಯಲ್ಲಿ ನೈಜ ಕಾಳಜಿ ಹೊಂದಿದೆ. 2005-06ರಲ್ಲಿ ಈ ವರ್ಗಕ್ಕೆ ಕೇವಲ ರೂ.655 ಕೋಟಿ ಅನುದಾನ ಮಾತ್ರ ಒದಗಿಸಲಾಗಿತ್ತು. ಕಳೆದ ವರ್ಷ ಈ ಅನುದಾನ ವನ್ನು ರೂ.3,958 ಕೋಟಿಗೆ ಹೆಚ್ಚಿಸಲಾಯಿತು. ಅಂದರೆ 3 ವರ್ಷದಲ್ಲಿ ಆರು ಪಟ್ಟು ಹೆಚ್ಚು ಅನುದಾನವನ್ನು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭಿವೃದ್ಧಿಗೆ ಒದಗಿಸಿದ್ದೇವೆ.

48. ಅಲ್ಪಸಂಖ್ಯಾತರ ಅಭಿವೃದ್ಧಿಗೂ ನಮ್ಮ ಸರ್ಕಾರ ವಿಶೇಷ ಗಮನ ಹರಿಸಿದೆ. 2004-05ರಲ್ಲಿ ಕೇವಲ ರೂ.10 ಕೋಟಿ, 2005-06ರಲ್ಲಿ ರೂ.14 ಕೋಟಿ ಅನುದಾನವನ್ನು ಮಾತ್ರ ಅಲ್ಪಸಂಖ್ಯಾತರ ಅಭಿವೃದ್ಧಿಗೆ ನೀಡಲಾಗಿತ್ತು. ನಾವು 2008-09ನೇ ಆಯವ್ಯಯದಲ್ಲಿ ಈ ಅನುದಾನವನ್ನು ರೂ.143 ಕೋಟಿಗೆ ಏರಿಸಿದೆವು.

49. ಡಾ: ಡಿ.ಎಂ.ನಂಜುಂಡಪ್ಪ ಶಿಫಾರಸ್ಸುಗಳ ಜಾರಿಗೆ ಪ್ರತ್ಯೇಕ ಶೀರ್ಷಿಕೆ ಯಡಿ 2008-09 ರಲ್ಲಿ ರೂ.2,547 ಕೋಟಿ ಅನುದಾನ ಹಂಚಿಕೆ ಮಾಡಲಾಗಿತ್ತು. (ರೂ.1,739 ಕೋಟಿ ಖರ್ಚು ಮಾಡಲಾಗಿದೆ). ಡಾ: ನಂಜುಂಡಪ್ಪ ವರದಿ ಅನುಷ್ಠಾನಕ್ಕಾಗಿ ಶ್ರೀ ಶಶೀಲ್ ನಮೋಶಿ ಅವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ.

50. ಖಾಸಗಿ ಕ್ಷೇತ್ರಗಳ ಪರಿಣತರು ಮತ್ತು ತಜ್ಞರ ಅನುಭವ ಮತ್ತು ಜ್ಞಾನವನ್ನು ಬಳಸಿಕೊಂಡು ಸರ್ಕಾರದ ಯೋಜನೆಗಳ ಅನುಷ್ಠಾನದಲ್ಲಿ ಸುಧಾರಣೆ ತರಲು ಮತ್ತು ಗುಣಮಟ್ಟ ಹೆಚ್ಚಿಸಲು ವಿವಿಧ ಕಾರ್ಯಪಡೆಗಳನ್ನು ರಚಿಸಲಾಗಿದೆ.

51. ಡಾ: ಕಸ್ತೂರಿ ರಂಗನ್ ಅಧ್ಯಕ್ಷತೆಯಲ್ಲಿ ಜ್ಞಾನ ಆಯೋಗ, ಡಾ: ಸಿ.ಎನ್.ಆರ್.ರಾವ್ ಅಧ್ಯಕ್ಷತೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ವಿಷನ್ ಗ್ರೂಪ್, ಶ್ರೀ ನಂದನ್ ನೀಲೇಕಣಿ ಅವರ ಅಧ್ಯಕ್ಷತೆಯಲ್ಲಿ ಇ-ಆಡಳಿತ, ಶ್ರೀ ಕ್ರಿಸ್ ಗೋಪಾಲಕೃಷ್ಣರವರ ಅಧ್ಯಕ್ಷತೆಯಲ್ಲಿ ಕೈಗಾರಿಕಾ ಕಾರ್ಯಪಡೆ, ಹೀಗೆ ಹಲವು ಕಾರ್ಯಪಡೆಗಳ ಮುಖಾಂತರ ನಮ್ಮ ಆಡಳಿತದಲ್ಲಿ ನವೀನತೆ, ದಕ್ಷತೆ ಮತ್ತು ಪಾರದರ್ಶಕತೆಯನ್ನು ತರಲು ಪ್ರಯತ್ನ ಮಾಡಿದ್ದೇವೆ.

ವಿದ್ಯುತ್ ಸಮಸ್ಯೆ ಮತ್ತು ನಿವಾರಣೆಗೆ ಕ್ರಮ :

52. ದೇಶದಲ್ಲೆ ಪ್ರಪ್ರಥಮವಾಗಿ ವಿದ್ಯುತ್ ಉತ್ಪಾದಿಸಿದ ರಾಜ್ಯ ಕರ್ನಾಟಕ ವಾಗಿದ್ದರೂ ದೂರದೃಷ್ಟಿಯ ಕೊರತೆಯಿಂದಾಗಿ ನಾವೀಗ ವಿದ್ಯುತ್ ಅಭಾವ ಎದುರಿಸುತ್ತಿದ್ದೇವೆ.

53. ಕಳೆದ ವರ್ಷ ಜಲಾಶಯಗಳ ನೀರಿನ ಮಟ್ಟ ಕನಿಷ್ಠ ಮಟ್ಟಕ್ಕೆ ಇಳಿದು ರಾಜ್ಯದಲ್ಲಿ ತೀವ್ರ ವಿದ್ಯುತ್ ಅಭಾವ ತೋರಿತ್ತು. ಸುಮಾರು ರೂ.3000 ಕೋಟಿ ಹೆಚ್ಚುವರಿ ವಿದ್ಯುತ್ ಖರೀದಿಸಿ ಈ ವಿದ್ಯುತ್ ಕ್ಷಾಮವನ್ನು ನಾವು ಸಮರ್ಥವಾಗಿ ಎದುರಿಸಿದೆವು.

54. ಈ ವರ್ಷ ಭಗವಂತನ ಕೃಪೆಯಿಂದ ಜುಲೈ ತಿಂಗಳಲ್ಲಿ ಸಂತಸ ತರುವ ರೀತಿಯಲ್ಲಿ ರಾಜ್ಯದಲ್ಲಿ ಮಳೆಯಾಗಿ ಜಲಾಶಯಗಳಿಗೆ ಹೆಚ್ಚು ಪ್ರಮಾಣದಲ್ಲಿ ನೀರು ಹರಿದು ಬಂದಿದೆ. ಬಹಳಷ್ಟು ಜಲಾಶಯಗಳು ತುಂಬಿವೆ, ಇಲ್ಲ ತುಂಬುತ್ತಿವೆ.

55. ಲಿಂಗನಮಕ್ಕಿಯಲ್ಲಿ ಕಳೆದ 10 ವರ್ಷದಲ್ಲಿಯೇ ಅತಿ ಹೆಚ್ಚು ನೀರು ಸಂಗ್ರಹವಾಗಿದ್ದು ಇದರಿಂದ ನಮ್ಮ ವಿದ್ಯುತ್ ಸಮಸ್ಯೆ ಬಹಳಷ್ಟು ಮಟ್ಟಿಗೆ ನೀಗಲಿದೆ ಎಂದು ನಿರೀಕ್ಷಿಸಲಾಗಿದೆ.

56. ನಮ್ಮ ಎಲ್ಲ ಉಷ್ಣ ಸ್ಥಾವರಗಳಲ್ಲಿ ಸಾಕಷ್ಟು ಪ್ರಮಾಣದ ಕಲ್ಲಿದ್ದಲು ದಾಸ್ತಾನು ಮಾಡಲಾಗಿದೆ. ಕರ್ನಾಟಕ ವಿದ್ಯುತ್ ನಿಗಮದ ಕೇಂದ್ರಗಳು ಶೇ. 95 ರಷ್ಟು ಕಾರ್ಯಕ್ಷಮತೆಯಲ್ಲಿ ಕೆಲಸ ಮಾಡುತ್ತಿವೆ.

57. ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಿದಂತೆ ನಮ್ಮ 5 ವರ್ಷದ ಅವಧಿಯಲ್ಲಿ 5000 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವತ್ತ ದಾಪುಗಾಲು ಹಾಕುತ್ತಿದ್ದೇವೆ. ಕಳೆದ ವರ್ಷ ಸುಮಾರು 1000 ಮೆಗಾವ್ಯಾಟ್ ವಿದ್ಯುತ್ ಸಾಮರ್ಥ್ಯವನ್ನು ಹೊಸದಾಗಿ ಸೇರಿಸಿದ್ದೇವೆ. ಈ ವರ್ಷ ಇನ್ನೂ ಸುಮಾರು 1300 ಮೆಗಾವ್ಯಾಟ್ ಹೆಚ್ಚುವರಿ ಸಾಮರ್ಥ್ಯವನ್ನು ವಿದ್ಯುತ್ ಜಾಲಕ್ಕೆ ಸೇರಿಸಲಿದ್ದೇವೆ.

58. ಕಳೆದ ಅಕ್ಟೋಬರ್ 2008ರಲ್ಲಿ ಶಂಕುಸ್ಥಾಪನೆ ಮಾಡಿದ 2 ಸೋಲಾರ್ ಪವರ್ ಸ್ಟೇಷನ್‌ಗಳಲ್ಲಿ ಈ ವರ್ಷದ ಅಕ್ಟೋಬರ್ ತಿಂಗಳಿಂದ 6 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಪ್ರಾರಂಭಿಸ ಲಾಗುವುದು. ಇಡೀ ದೇಶದಲ್ಲಿಯೇ ಸೌರ ಶಕ್ತಿಯಿಂದ ಇಷ್ಟೊಂದು

ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ ಮಾಡುತ್ತಿರುವುದು ಇದೇ ಮೊದಲಾಗಿದೆ.

59. ಕೆ.ಪಿ.ಸಿ.ಎಲ್. ಮುಖಾಂತರ ರಾಯಚೂರು, ಬಳ್ಳಾರಿ ಮತ್ತು ಛತ್ತೀಸ್ ಗಢಗಳಲ್ಲಿ ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸುವ ಕಾರ್ಯ ಚುರುಕಾಗಿ ನಡೆಯುತ್ತಿದೆ. ಈ ದಿಶೆಯಲ್ಲಿ ಈಗಾಗಲೇ ಪವರ್ ಫೈನಾನ್ಸ್ ಕಾರ್ಪೊರೇಷನ್ ಮುಖಾಂತರ ರೂ.7,046 ಕೋಟಿ ಸಾಲ, ಇಂಡಸ್ಟ್ರೀಯಲ್ ಫೈನಾನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಮುಖಾಂತರ ರೂ.683 ಕೋಟಿ ಷೇರು ಬಂಡವಾಳ ಮತ್ತು ವಿವಿಧ ಬ್ಯಾಂಕುಗಳ ಮುಖಾಂತರ ರೂ.843 ಕೋಟಿ ಸಾಲ ಮಂಜೂರಾಗಿದೆ.

60. ಭಾರತ ಸರ್ಕಾರದ ನಿಗಮದ ಬಿ.ಹೆಚ್.ಇ.ಎಲ್. ಜೊತೆ ಜಂಟಿಯಾಗಿ ರಾಯಚೂರು ಪವರ್ ಕಾರ್ಪೊರೇಷನ್ ಎಂಬ ಒಂದು ಉಪ ಸಂಸ್ಥೆಯನ್ನು ರಚಿಸಲಾಗಿದೆ.

61. ಛತ್ತೀಸ್ ಗಢದಲ್ಲಿ ಅತ್ಯಂತ ಆಧುನಿಕ ತಂತ್ರಜ್ಞಾನವನ್ನು ಬಳಸಿ ಎಲ್. ಅಂಡ್ ಟಿ. ಸಹಭಾಗಿತ್ವದಲ್ಲಿ ವಿದ್ಯುತ್ ಕೇಂದ್ರ ಸ್ಥಾಪಿಸುವುದಕ್ಕಾಗಿ ಭೂ ಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಗಿದೆ.

62. ಬಿಜಾಪುರ ಜಿಲ್ಲೆ ಕೂಡ್ಗಿಯಲ್ಲಿ ಎನ್.ಟಿ.ಪಿ.ಸಿ. ಮುಖಾಂತರ 4000 ಮೆಗಾವ್ಯಾಟ್ ವಿದ್ಯುತ್ ಸ್ಥಾವರ ಸ್ಥಾಪನೆಗೆ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಗಿದೆ.

63. ಮಹಾರಾಷ್ಟ್ರದ ಧಬೋಲ್‌ನಿಂದ ಬೆಂಗಳೂರಿಗೆ ಗ್ಯಾಸ್ ಪೈಪ್‌ಲೈನ್ ಹಾಕುವ ಪ್ರಕ್ರಿಯೆಗೆ ಕೇಂದ್ರ ಸರ್ಕಾರದ ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಸಂಸ್ಥೆ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಇದರಿಂದ ಬೆಂಗಳೂರು ಬಳಿ ಅಲ್ಲದೆ ಮಾರ್ಗ ಮಧ್ಯದಲ್ಲಿ ವಿವಿಧೆಡೆ ಗ್ಯಾಸ್ ಆಧಾರಿತ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲು ಸಾಧ್ಯವಾಗುವುದು.

64. ಒಟ್ಟಿನಲ್ಲಿ ನಾವು ಆಶ್ವಾಸನೆ ನೀಡಿದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದಿಸಲು ನಮ್ಮ ಸರ್ಕಾರ ಎಲ್ಲ ಸಿದ್ಧತೆಗಳನ್ನು ಮತ್ತು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

65. ಬಹು ದಿನಗಳಿಂದ ನೆನೆಗುದಿಗೆ ಬಿದ್ದಿದ್ದ ಶಿವನಸಮುದ್ರಂ ಜಲ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೆ ತೀವ್ರ ಚಾಲನೆ ನೀಡಿ ಭಾರತ ಸರ್ಕಾರ ದಿಂದ ಪ್ರಾಥಮಿಕ ಅನುಮತಿ ಪಡೆದುಕೊಳ್ಳಲಾಗಿದೆ.

66. ಹಾಸನ ಜಿಲ್ಲೆಯಲ್ಲಿ ಗುಂಡ್ಯಾ ಜಲವಿದ್ಯುತ್ ಯೋಜನೆಗೂ ಶಂಕುಸ್ಥಾಪನೆ ನಡೆಸಲಾಗಿದ್ದು ಶೀಘ್ರದಲ್ಲಿ ಕೆಲಸ ಪ್ರಾರಂಭವಾಗಲಿದೆ.
67. ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆಗೂ ಹೆಚ್ಚಿನ ಪ್ರೋತ್ಸಾಹ ನೀಡಿದೆ.

ಬೆಂಗಳೂರು ಅಭಿವೃದ್ಧಿಗೆ ತೀವ್ರ ಚಾಲನೆ :

68. ಅಂದು ನಾಡಪ್ರಭು ಕೆಂಪೇಗೌಡರು ಕಟ್ಟಿದ ಬೆಂಗಳೂರು ಇಂದು ಜಾಗತೀಕ ನಗರವಾಗಿ ಬೃಹದಾಕಾರವಾಗಿ ಬೆಳೆಯುತ್ತಿದೆ.
69. ನೂರಾರು ಅಂತರರಾಷ್ಟ್ರೀಯ ಕಂಪನಿಗಳ ಹಾಗೂ ಐ.ಟಿ.ಬಿ.ಟಿ. ಕೈಗಾರಿಕೆಗಳ ಉಗಮ ಸ್ಥಾನವಾಗಿ ಮತ್ತು ಅಭಿವೃದ್ಧಿ ತಾಣವಾಗಿ ಏಷಿಯಾ ಖಂಡದಲ್ಲಿಯೇ ಅತಿ ವೇಗದಲ್ಲಿ ಬೆಳೆಯುವ ಮಹಾನಗರ ನಮ್ಮ ಬೆಂಗಳೂರು.
70. ಆದರೆ ಕಳೆದ ಎರಡು ಮೂರು ದಶಕಗಳಲ್ಲಿ ನಗರದ ಬೆಳವಣಿಗೆಯ ವೇಗಕ್ಕೆ ಹಾಗೂ ಜನರ ಆಶೋತ್ತರಗಳಿಗೆ ತಕ್ಕಂತೆ ಇಲ್ಲಿನ ರಸ್ತೆಗಳು ಮೇಲುಸೇತುವೆಗಳು, ಸಮೂಹ ಸಾರಿಗೆ ಸೌಲಭ್ಯಗಳು, ನೀರು ಮತ್ತು ಒಳಚರಂಡಿ ವ್ಯವಸ್ಥೆಗಳು. ಉದ್ಯಾನವನಗಳು ಮತ್ತು ಕೆರೆಗಳು ಅಭಿವೃದ್ಧಿಯಾಗಲಿಲ್ಲ.
71. ದೂರದೃಷ್ಠಿ ಮತ್ತು ಇಚ್ಛಾಶಕ್ತಿಯ ಕೊರತೆಯಿಂದಾಗಿ ಈ ನಗರದಲ್ಲಿ ಜನದಟ್ಟಣೆ ಮತ್ತು ವಾಹನದಟ್ಟಣೆ ಸಮಸ್ಯೆಗಳು ಹಿರಿದಾಗಿ ಬೆಳೆದು ಮೂಲಸೌಲಭ್ಯಗಳ ಕೊರತೆ ಎದ್ದು ಕಾಣುತ್ತಿದೆ.
72. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ನಾವು ನಮ್ಮ ರಾಜಧಾನಿಯ ಅಭಿವೃದ್ಧಿಗೆ ವಿಶೇಷ ಗಮನ ಹರಿಸಿ ನನ್ನ ಅಧ್ಯಕ್ಷತೆಯಲ್ಲಿ ನಗರದ ತಜ್ಞರು ಮತ್ತು ಗಣ್ಯರನ್ನು ಒಳಗೊಂಡಂತೆ ABIDe (ಅಜೆಂಡಾ ಫಾರ್ ಬೆಂಗಳೂರು ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್) ಎಂಬ **ಕಾರ್ಯಪಡೆಯನ್ನು** ರಚಿಸಲಾಯಿತು.
73. ಈ ಕಾರ್ಯಪಡೆ ಎಲ್ಲ ವರ್ಗಗಳ ಜನರು ಮತ್ತು ಪರಿಣಿತರ ಸಲಹೆ ಪಡೆದು ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಯೋಜನೆಗಳನ್ನು ರೂಪಿಸಿದೆ.
74. ನಮ್ಮ ಬೆಂಗಳೂರಿನ ಜನರು ನೆಮ್ಮದಿಯ ಬಾಳು ಬಾಳಲು ನನ್ನದೇ ಆದ ಒಂದು ಕನಸನ್ನು ಇಟ್ಟುಕೊಂಡಿದ್ದೇನೆ.

75. **ನನ್ನ ಕನಸಿನ ಬೆಂಗಳೂರು**

ನನ್ನ ಕನಸಿನ ಬೆಂಗಳೂರಲಿ
ದಿನ ದಿನವೂ ನಸುಕಿನಲೆ
ಕಸವೆಲ್ಲ ದೂರ ಸಾಗಿ ರಸವಾಗಬೇಕು
ಬೀದಿ–ಬೀದಿಗಳೂ
ಸ್ವಚ್ಛತೆಯ ಬಿಂಬಿಸಬೇಕು

ಮನೆ ಮನೆಯಲ್ಲೂ,
ನಳ ತಿರುವಿದರೆ ಸಾಕು
ಜುಳು–ಜುಳು ನೀರು ಧುಮುಕಬೇಕು
ಸ್ವಿಚ್ ಹಾಕಿದರೆ ಸಾಕು
ವಿದ್ಯುತ್ ದೀಪ ಚಮಕಬೇಕು

ನಡೆದ ದೂರದಲೆ
ಮಕ್ಕಳಿಗೆ ಶಾಲೆ – ಮೈದಾನಗಳು
ಯುವಕರಿಗೆ ಮನರಂಜನೆ ಸ್ಥಳಗಳು
ಕಲೋಪಾಸಕ್ತರಿಗೆ ಸಾಂಸ್ಕೃತಿಕ ಕೇಂದ್ರಗಳು
ವೃದ್ಧರಿಗೆ ಪಾರ್ಕುಗಳು ತಲೆ ಎತ್ತಬೇಕು
ಐ.ಟಿ. – ಬಿ.ಟಿ. ಟೆಕ್ಕಿಗಳಿಗೆ
ನಗರದೆಲ್ಲೆಡೆ ವೈಫೈ ಜಾಲ ಹಬ್ಬಿರಬೇಕು

ಪ್ರತಿ ಬಡಾವಣೆಯೂ
ಉದ್ಯಾನವನದ ಬೀಡಾಗಬೇಕು
ಪ್ರತಿ ಕೆರೆಯೂ
ವಿಹಾರದ ಸಂಗಮವಾಗಬೇಕು

ನಗರದ ಉದ್ದಗಲಕ್ಕೂ
ಮೆಟ್ರೋ – ಮೋನೋಗಳು
ಮನೆ ಮಾತಾಗಬೇಕು

ವಾಹನ ದಟ್ಟಣೆಗೆ
ಜನ – ತಾನೇ ಕಡಿವಾಣ ಹಾಕಬೇಕು
ಪಾದಚಾರಿಗಳು ಸುಗಮವಾಗಿ ಸಾಗಬೇಕು
ಅಪಾಯದ ಅಂಜಿಕೆಯಿಲ್ಲದೇ
ರಸ್ತೆ ದಾಟಬೇಕು
ಕೊಳಚೆ ಪ್ರದೇಶಗಳು
ಭರದಲ್ಲಿ ಬದಲಾವಣೆಯಾಗಬೇಕು
ಬಡವರ ಸುಂದರ ತಾಣವಾಗಬೇಕು

ನನ್ನ ಕನಸಿನ ಬೆಂಗಳೂರಲಿ
ಮಧ್ಯರಾತ್ರಿಯೂ ಮಹಿಳೆಯು
ನಿರ್ಭಯವಾಗಿ ಮನೆ ತಲುಪಬೇಕು
ಸರ್ವರೂ ನೆಮ್ಮದಿಯ
ಬಾಳ – ಬಾಳಬೇಕು

76. ಈ ಕನಸನ್ನು ನನಸು ಮಾಡುವತ್ತ ನಾವೀಗಾಗಲೇ ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಹಲವಾರು ಕಾರ್ಯಗಳನ್ನು ಕೈಗೊಂಡಿದ್ದೇವೆ. ಕೆಲವನ್ನು ಮಾತ್ರ ಇಲ್ಲಿ ಉಲ್ಲೇಖಿಸ ಬಯಸುತ್ತೇನೆ.

76.1 ರೂ.70 ಕೋಟಿ ವೆಚ್ಚದಲ್ಲಿ ಸುಮಾರು 5 ಕಿ.ಮೀ. ಉದ್ದದ ಆರು ಪಥಗಳ ಹೊರ ವರ್ತುಲ ರಸ್ತೆ ಪೂರ್ಣಗೊಂಡಿದೆ.

76.2 ಮಾಗಡಿ ರಸ್ತೆ ಮತ್ತು ಮೈಸೂರು ರಸ್ತೆ ಸಂಪರ್ಕಿಸುವ ಹೊರ ವರ್ತುಲ ರಸ್ತೆ ಅಭಿವೃದ್ಧಿಗೆ ರೂ.190 ಕೋಟಿ ಖರ್ಚು ಮಾಡಲಾಗುತ್ತಿದ್ದು ಕಾಮಗಾರಿ ಮುಕ್ತಾಯ ಹಂತದಲ್ಲಿದೆ.

76.3 ಅಗರ ಮತ್ತು ಇಬ್ಬಲೂರು ಜಂಕ್ಷನ್ ಬಳಿ ರೂ. 93 ಕೋಟಿ ವೆಚ್ಚದಲ್ಲಿ ಎರಡು ಮೇಲುಸೇತುವೆ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.

76.4 ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಹೆಬ್ಬಾಳ್‌ವರೆಗೆ ಸಿಗ್ನಲ್ ರಹಿತ ರಸ್ತೆ ನಿರ್ಮಾಣ ಮುಂದಿನ ವರ್ಷ ಮುಕ್ತಾಯಗೊಳ್ಳಲಿದೆ.

76.5 ಹೆಬ್ಬಾಳ ಮೇಲ್ ಸೇತುವೆಯಿಂದ ಕಂಠೀರವ ಸ್ಟುಡಿಯೋದ ವರೆಗೆ ಸಿಗ್ನಲ್ ಮುಕ್ತ ಸಂಚಾರಕ್ಕಾಗಿ ರೂ. 450 ಕೋಟಿ ವೆಚ್ಚ ಮಾಡಲಿದ್ದೇವೆ.

76.6 ಬೆಂಗಳೂರಿನಲ್ಲಿ ನೀವು ಇವತ್ತು ಎತ್ತ ಹೋದರೂ ರಸ್ತೆ ಅಗಲೀಕರಣ ಅಥವಾ ಅಭಿವೃದ್ಧಿ, ಅಂಡರ್ ಪಾಸ್ ಅಥವಾ ಮೇಲುಸೇತುವೆ ನಿರ್ಮಾಣ, ಪಾದಚಾರಿ ಪಥಗಳ ದುರಸ್ತಿ, ಚರಂಡಿ ಹೂಳೆತ್ತುವುದು ಅಥವಾ ನಿರ್ಮಾಣ ಹೀಗೆ ಹತ್ತಾರು ಕಾಮಗಾರಿಗಳು ನಿಮ್ಮ ಗಮನ ಸೆಳೆಯುತ್ತಿವೆ.

76.7 ಬಿ.ಬಿ.ಎಂ.ಪಿ. ಮುಖಾಂತರ 8 ಪ್ರಧಾನ ರಸ್ತೆಗಳ ಅಗಲೀಕರಣ ಮತ್ತು ಅಭಿವೃದ್ಧಿಗೆ ಕಳೆದ ವರ್ಷ ರೂ. 132 ಕೋಟಿ ವೆಚ್ಚ ಮಾಡಲಾಗಿದೆ. ನಗರದ ಒಟ್ಟು 1276 ಕಿ.ಮೀ. ರಸ್ತೆಗಳ ಅಭಿವೃದ್ಧಿಗೆ ರೂ. 563 ಕೋಟಿ ವೆಚ್ಚ ಮಾಡಲಾಗಿದೆ.

76.8 ನಗರದ ಜನರ ಕುಡಿಯುವ ನೀರಿನ ಬೇಡಿಕೆಯನ್ನು ಈಡೇರಿಸಲು ಕಾವೇರಿ 4ನೇ ಸ್ಟೇಜಿನ 2ನೇ ಹಂತದ ಯೋಜನೆಯನ್ನು ರೂ.4 ಸಾವಿರ ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಇದಲ್ಲದೆ, ಕರ್ನಾಟಕ ಮುನಿಸಿಪಲ್ ರಿಫಾರ್ಮ್ಸ್ ಪ್ರೋಗ್ರಾಂ ಅಡಿ ರೂ.1000 ಕೋಟಿ ವೆಚ್ಚದಲ್ಲಿ ಒಳಚರಂಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿ ಕೊಳ್ಳಲಾಗಿದೆ.

76.9 ಬೃಹತ್ ಬೆಂಗಳೂರಿಗೆ ಹೊಸದಾಗಿ ಸೇರಿಸಿದ ಪ್ರದೇಶಗಳಲ್ಲಿ ಕುಡಿಯುವ ನೀರಿನ ಬವಣೆ ನೀಗಿಸಲು ರೂ.100 ಕೋಟಿ ವೆಚ್ಚದಲ್ಲಿ ಕುಡಿಯುವ ನೀರಿನ ಕಿರು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.

76.10 ಹೆಚ್ಚುತ್ತಿರುವ ಕುಡಿಯುವ ನೀರಿನ ಬೇಡಿಕೆಯನ್ನು ಈಡೇರಿಸಲು ಮತ್ತು ಅಗತ್ಯವಿರುವ ಒಳಚರಂಡಿ ವ್ಯವಸ್ಥೆಯನ್ನು ನಿರ್ಮಾಣ ಮಾಡಲು ಬಿ.ಡಬ್ಲ್ಯೂ.ಎಸ್.ಎಸ್.ಬಿ. ದೀರ್ಘ ಕಾಲದ ಯೋಜನೆಗಳನ್ನು ಹಾಕಿಕೊಂಡಿದ್ದು ಅನುಷ್ಠಾನ ಪ್ರಾರಂಭವಾಗಿದೆ.

76.11 ಇದರ ಜೊತೆಗೆ ಬೆಂಗಳೂರನ್ನು ಸುಂದರೀಕರಣಗೊಳಿಸುವ ಕಾರ್ಯವೂ ಭರದಿಂದ ಸಾಗಿದೆ. ಪ್ರತಿ ಬಡಾವಣೆಯಲ್ಲಿಯೂ ಆಕರ್ಷಕ ಪಾರ್ಕುಗಳನ್ನು ಅಭಿವೃದ್ಧಿಪಡಿಸುತ್ತಿದ್ದೇವೆ. ಕಳೆದ ವರ್ಷ ಬಿ.ಬಿ.ಎಂ.ಪಿ. ಮುಖಾಂತರ 73 ಪಾರ್ಕುಗಳು ಮತ್ತು ಬಿ.ಡಿ.ಎ. ಮುಖಾಂತರ 7 ಪಾರ್ಕುಗಳನ್ನು ಅಭಿವೃದ್ಧಿ ಪಡಿಸಿದ್ದೇವೆ.

76.12 ಮಾಗಡಿ ರಸ್ತೆಯಲ್ಲಿರುವ ನಿರಾಶ್ರಿತರ ಕಾಲೋನಿಯಲ್ಲಿ ಮತ್ತು ನಗರದ ಇತರೆ ದಿಕ್ಕುಗಳಲ್ಲಿ ಮಿನಿ ಲಾಲ್‌ಬಾಗ್‌ಗಳನ್ನು ಅಭಿವೃದ್ಧಿಪಡಿಸಲು ಯೋಜನೆ ರೂಪಿಸಿದ್ದೇವೆ.

76.13 ಹಂತ ಹಂತವಾಗಿ ಬೆಂಗಳೂರು ನಗರದ ಎಲ್ಲಾ ಕೆರೆಗಳಿಗೂ ಮರು ಜೀವ ಕೊಡಲು ಕಾರ್ಯಕ್ರಮಗಳನ್ನು ರೂಪಿಸಿ, ಅವುಗಳಲ್ಲಿ ಮಳೆಯ ನೀರನ್ನು ಹಿಡಿದಿರುವುದರ ಜೊತೆಗೆ ಈ ಕೆರೆಗಳ ಸುತ್ತಮುತ್ತ ಸುಂದರವಾದ ಪಾರ್ಕುಗಳು ಮತ್ತು ಜನರ ವಿಹಾರಕ್ಕೆ ಸೌಲಭ್ಯ ಕಲ್ಪಿಸುತ್ತಿದ್ದೇವೆ.

76.14 ಕಳೆದ ವರ್ಷ ಬಿ.ಬಿ.ಎಂ.ಪಿ. ಮುಖಾಂತರ ರೂ.190 ಕೋಟಿ ವೆಚ್ಚದಲ್ಲಿ 17 ಕೆರೆಗಳು ಮತ್ತು ಬಿ.ಡಿ.ಎ ಮುಖಾಂತರ ರೂ.104 ಕೋಟಿ ವೆಚ್ಚದಲ್ಲಿ 12 ಕೆರೆಗಳ ಅಭಿವೃದ್ಧಿ ಕಾರ್ಯಪ್ರಾರಂಭವಾಗಿದೆ.

76.15 ಕನಕಪುರ ರಸ್ತೆಯಲ್ಲಿರುವ 400 ಎಕರೆಗೂ ಹೆಚ್ಚು ವಿಸ್ತೀರ್ಣದ ದೇವಿಕಾ ರಾಣಿ ರೋರಿಕ್ ಎಸ್ಟೇಟ್ ವಿಷಯ ಸುಪ್ರೀಂ ಕೋರ್ಟಿನಲ್ಲಿದ್ದು ಸದರಿ ನ್ಯಾಯಾಲಯದ ಆದೇಶಕ್ಕೆ ಒಳಪಟ್ಟು ಈ ಎಸ್ಟೇಟನ್ನು ಕಲೋಪಾಸಕರ ಮತ್ತು ವಿದ್ಯಾರ್ಥಿಗಳ ಕಲೆ ಹಾಗೂ ಸೃಜನಶೀಲನೆಯ ಸಾಕ್ಷಾತ್ಕಾರಕ್ಕೆ ಅಭಿವೃದ್ಧಿಪಡಿಸಲಿದ್ದೇವೆ.

76.16 ಇದೇ ರಸ್ತೆಯಲ್ಲಿರುವ ಬಿ.ಎಂ. ಕಾವಲಿನಲ್ಲಿ ಸುಮಾರು 180 ಎಕರೆಯಲ್ಲಿ ಸಿಟಿ ಫಾರೆಸ್ಟ್ ಬೆಳೆಸುವ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ.

76.17 ಐದು ಹೊಸ ಬಡಾವಣೆಗಳಿಗೆ ಅನುಮೋದನೆಗೆ ನೀಡಿ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಿದ್ದೇವೆ. ಈ ಬಡಾವಣೆಗಳಲ್ಲಿ ಉತ್ತಮ ಮಟ್ಟದ ಉದ್ಯಾನವನಗಳು ಮತ್ತು ಕೆರೆಗಳನ್ನು ಅಭಿವೃದ್ಧಿಪಡಿಸಲಾಗುವುದು.

76.18 ನಮ್ಮ ಮೆಟ್ರೋ ಕಾಮಗಾರಿ ಸಹ ತ್ವರಿತಗತಿಯಿಂದ ನಡೆಯುತ್ತಿದೆ. ಡಿಸೆಂಬರ್ 2010ರ ಒಳಗೆ ಈ ಯೋಜನೆಯ ಮೊದಲ ಹಂತ ಪೂರ್ಣಗೊಂಡು ಮೆಟ್ರೋ ರೈಲಿನಲ್ಲಿ ಪ್ರಯಾಣಿಸುವ ಬೆಂಗಳೂರು ಜನತೆಯ ಬಹುದಿನಗಳ ಕನಸು ನನಸಾಗಲಿದೆ.

76.19 ಜನದಟ್ಟಣೆ ಮತ್ತು ವಾಹನದಟ್ಟಣೆ ಕಡಿಮೆಗೊಳಿಸಲು ನಗರದ ಮಧ್ಯ ಭಾಗದಲ್ಲಿರುವ ರೇಸ್ ಕೋರ್ಸ್‌ನ್ನು ಹೊರ ವಲಯಕ್ಕೆ ಸ್ಥಳಾಂತರಿಸುವ ನಮ್ಮ ನಿಲುವು ಸಹ ದೃಢ ರೂಪ ತಾಳಿದ್ದು, ಇದಕ್ಕಾಗಿ ಚಿಕ್ಕಜಾಲದ ಬಳಿ ಸರ್ಕಾರಿ ಜಮೀನನ್ನು ಗುರುತಿಸಲಾಗಿದೆ. ಈ ಜಮೀನನ್ನು ಹೊಸ ರೇಸ್ ಕೋರ್ಸ್ ನಿರ್ಮಾಣಕ್ಕಾಗಿ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲು ಸರ್ಕಾರ ನಿರ್ಧಾರ ತೆಗೆದುಕೊಂಡಿದೆ.

76.20 ಈಗಿರುವ ರೇಸ್‌ಕೋರ್ಸ್ ಪ್ರದೇಶದ ಬಹು ಭಾಗದಲ್ಲಿ ಒಂದು ಅತ್ಯಂತ ಸುಂದರವಾದ ಉದ್ಯಾನವನ್ನು ನಿರ್ಮಾಣ ಮಾಡುವುದರ ಜೊತೆಗೆ ಬಿ.ಡಿ.ಎ. ಮುಖಾಂತರ ತಜ್ಞರ ಸಲಹೆ ಪಡೆದು ಮುಂದಿನ ಯೋಜನೆ ರೂಪಿಸಲಾಗುವುದು.

76.21 ಪ್ರತಿ ಭಾನುವಾರ ನಗರದ ಜನರಿಗೆ ಉಚಿತ ಮನೋರಂಜನೆ ಒದಗಿಸಲು ಲಾಲ್‌ಬಾಗ್, ಕಬ್ಬನ್ ಪಾರ್ಕ್, ಫ್ರೀಡಂಪಾರ್ಕ್ ಮತ್ತಿತರ ಪ್ರಮುಖ ಉದ್ಯಾನವನಗಳಲ್ಲಿ ಸಂಜೆ ವೇಳೆ ಸ್ಥಳೀಯ ಕಲೆ ಸಂಸ್ಕೃತಿಯನ್ನು ಬಿಂಬಿಸುವ ಸಂಗೀತ ನೃತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು.

76.22 ಜಾಗತಿಕ ನಗರವಾದ ಬೆಂಗಳೂರು ಇಡೀ ದೇಶದಲ್ಲೇ ಒಂದು ಮಾದರಿ ನಗರವಾಗಬೇಕೆಂದು ನಮ್ಮ ಅಭಿಲಾಷೆ.

ಈ ದಿಸೆಯಲ್ಲಿ ಸದನದ ಸದಸ್ಯರು ಸಹ ನಮ್ಮ ಸಲಹೆಗಳನ್ನು ನೀಡಬೇಕೆಂದು ಕೋರುತ್ತೇನೆ.

77. **ಇತರ ನಗರಗಳ ಅಭಿವೃದ್ಧಿಗೂ ಆದ್ಯತೆ :**

77.1 ಕೇವಲ ಬೆಂಗಳೂರು ನಗರದ ಅಭಿವೃದ್ಧಿಗೆ ಮಾತ್ರ ನಮ್ಮ ಯೋಜನೆಗಳು ಸೀಮಿತವಾಗಿಲ್ಲ. ಆಯವ್ಯಯದಲ್ಲಿ ಘೋಷಿಸಿದಂತೆ ಮಹಾನಗರ ಪಾಲಿಕೆಗಳ ಅಭಿವೃದ್ಧಿಗೆ ರೂ. 100 ಕೋಟಿ, ಇತರೆ ಜಿಲ್ಲಾ ಕೇಂದ್ರಗಳ ಅಭಿವೃದ್ಧಿಗೆ ರೂ.30 ಕೋಟಿ ಮತ್ತು ತಾಲ್ಲೂಕು ಕೇಂದ್ರಗಳ ಅಭಿವೃದ್ಧಿಗೆ ರೂ.5 ಕೋಟಿಯ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುವುದು.

77.2 ಬೆಂಗಳೂರು ಅಭಿವೃದ್ಧಿಗೆ ರಚಿಸಲಾದ ABIDe ಕಾರ್ಯಪಡೆ ಮಾದರಿಯಲ್ಲಿ ಇತರ ಜಿಲೆಗಳಲ್ಲೂ ಸಹ ಜಿಲ್ಲಾ ಸಚಿವರ ಅಧ್ಯಕ್ಷತೆಯಲ್ಲಿ ಸ್ಥಳಿತ ಗಣ್ಯರು ಮತ್ತು ತಜ್ಞರನ್ನು ಒಳಗೊಂಡ ಕಾರ್ಯಪಡೆಗಳನ್ನು ರಚಿಸಲಾಗುವುದು.

77.3 ಈ ನಗರಗಳಲ್ಲೂ ಕೂಡ ಪಾರ್ಕುಗಳು ಮತ್ತು ಕೆರೆಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು.

77.4 ಬೆಂಗಳೂರಿನಲ್ಲಿ ಏರ್ಪಡಿಸುವಂತೆ ಪ್ರಮುಖ ಜಿಲ್ಲಾ ಕೇಂಧ್ರಗಳ ಉದ್ಯಾನವನಗಳಲ್ಲೂ ಸಹ ಸ್ಥಳೀಯ ಕಲೆ ಹಾಗೂ ಸಂಸ್ಕೃತಿಯನ್ನು ಬಿಂಬಿಸುವ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು.

77.5 ಇದರಿಂದ ಸ್ಥಳೀಯ ಕಲಾವಿದರಿಗೆ ಪ್ರೋತ್ಸಾಹ ನೀಡುವುದರ ಜೊತೆಗೆ ನಗರದ ಜನರಿಗೆ ಸಿನೆಮಾ ಮತ್ತು ದೂರದರ್ಶನ ಹೊರತುಪಡಿಸಿ ಇತರೆ ಮನೋರಂಜನೆಗೆ ಅವಕಾಶವಾಗುವುದು.

ವಿಶ್ವ ಕನ್ನಡ ಸಮ್ಮೇಳನ :

78. ಇದೇ ಆರ್ಥಿಕ ವರ್ಷದಲ್ಲಿ ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ವಿಜೃಂಭಣೆಯಿಂದ ಆಚರಿಸಲಾಗುವುದು. ಹಾಗೆಯೇ ತಲಕಾಡು ಪಂಚಲಿಂಗ ದರ್ಶನಕ್ಕೂ ಸೂಕ್ತ ವ್ಯವಸ್ಥೆ ಮಾಡಲಾಗುತ್ತಿದೆ.

78.1 ಇದಕ್ಕಾಗಿ ತಲಕಾಡಿಗೆ ಬಂದು ಸೇರುವ ಎಲ್ಲಾ ರಸ್ತೆಗಳ ಅಭಿವೃದ್ಧಿಗೆ ಮಂಜೂರಾತಿ ನೀಡಿ ಅಗತ್ಯ ಅನುದಾನ ಬಿಡುಗಡೆ ಮಾಡಲಾಗಿದೆ.

78.2 ನಮ್ಮ ಸರ್ಕಾರ ನೆರೆ ಹೊರೆ ರಾಜ್ಯಗಳ ಜೊತೆ ಸೌಹಾರ್ದ ಸಂಬಂಧ ಇಟ್ಟುಕೊಳ್ಳಬಯಸುತ್ತದೆ.

78.3 ಯಾವುದೇ ಜಟಿಲ ಸಮಸ್ಯೆಯನ್ನು ಪರಸ್ಪರ ಚರ್ಚೆಯ ಮೂಲಕ ಬಗೆಹರಿಸಲು ಸಾಧ್ಯವೆಂದು ನಾನು ನಂಬಿರುತ್ತೇನೆ.

78.4 ನಮ್ಮ ರಾಜ್ಯದ ನೆಲ, ಜಲ ಮತ್ತು ಭಾಷೆಯ ವಿಷಯದಲ್ಲಿ ನಾವೆಲ್ಲರೂ ಪಕ್ಷಾತೀತವಾಗಿ ನಮ್ಮ ರಾಜ್ಯದ ಹಿತವನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಜೊತೆಗೆ ಪಕ್ಕದ ರಾಜ್ಯದ ಜನತೆ ಮತ್ತು ಸರ್ಕಾರಗಳ ಜೊತೆ ಚರ್ಚಿಸಿ ಜಟಿಲ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ನಿರಂತರವಾಗಿ ನಡೆಯುತ್ತಿರಬೇಕು.

78.5 ಸುಮಾರು ಒಂದೂವರೆ ದಶಕದಿಂದ ಬೆಂಗಳೂರಿನಲ್ಲಿ ತಿರುವಳ್ಳುವರ್ ಪ್ರತಿಮೆ ಹಾಗೂ ಚೆನ್ನೈನಲ್ಲಿ ಸರ್ವಜ್ಞರ ಪ್ರತಿಮೆಗಳನ್ನು ಸ್ಥಾಪಿಸುವ ವಿಷಯ ನೆನೆಗುದಿಗೆ ಬಿದ್ದಿತ್ತು.

78.6 ಈ ದಿಸೆಯಲ್ಲಿ ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ಕಳೆದ ತಿಂಗಳು ನಾನು ಚೆನ್ನೈಗೆ ಹೋದಾಗ ಅಲ್ಲಿನ ಮುಖ್ಯ ಮಂತ್ರಿಗಳಾದ ಶ್ರೀ ಕರುಣಾ ನಿಧಿಯವರನ್ನು ಭೇಟಿ ಮಾಡಿ ತಿರುವಳ್ಳುವಾರ್ ಮತ್ತು ಸರ್ವಜ್ಞ ಮೂರ್ತಿಗಳನ್ನು ಅನಾವರಣ ಮಾಡುವ ವಿಷಯದ ಬಗ್ಗೆ ಚರ್ಚೆ ಮಾಡಿರುತ್ತೇನೆ. ಈ ಸೌಹಾರ್ದಯುತ ಭೇಟಿಯಿಂದಾಗಿ ಹದಿನೇಳು ವರ್ಷಗಳಿಂದ ಬಾಕಿ ಇದ್ದ ಸಮಸ್ಯೆ ಈಗ ಬಗೆಹರಿಯುತ್ತಿದೆ.

78.7 ಉಭಯ ರಾಜ್ಯಗಳು ಒಪ್ಪಿರುವಂತೆ ತಿರುವಳ್ಳುವರ್ ಪ್ರತಿಮೆಯನ್ನು ಇದೇ ಆಗಸ್ಟ್ 9 ರಂದು ಬೆಂಗಳೂರಿನಲ್ಲಿ ಮತ್ತು ಸರ್ವಜ್ಞರ ಪ್ರತಿಮೆಯನ್ನು ಆಗಸ್ಟ್ 13 ರಂದು ಚೆನ್ನೈನಲ್ಲಿ ಅನಾವರಣಗೊಳಿಸಲು ತೀರ್ಮಾನ ತೆಗೆದು ಕೊಂಡಿರುತ್ತೇವೆ.

78.8 ನಾನು ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ವ ಪಕ್ಷಗಳ ಮತ್ತು ಸಂಘಟನೆಗಳ ಸಭೆಯನ್ನು ಶೀಘ್ರದಲ್ಲೇ ಕರೆದು ಸಮಾಲೋಚನೆ ನಡೆಸಲಿದ್ದೇನೆ. ತಮ್ಮೆಲ್ಲರ ಸಹಕಾರ ಮತ್ತು ಬೆಂಬಲ ಈ ವಿಷಯದಲ್ಲಿ ನನಗಿದೆ ಎಂದು ನಂಬಿರುತ್ತೇನೆ.

ಚಾಮುಂಡಿ ಬೆಟ್ಟದ ಅಭಿವೃದ್ಧಿ :

79. ಪ್ರತಿ ವರ್ಷ ಲಕ್ಷಾಂತರ ಭಕ್ತಾಧಿಗಳು ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡುತ್ತಿದ್ದಾರೆ. ಈ ಕ್ಷೇತ್ರವನ್ನು ತಿರುಪತಿ–ತಿರುಮಲ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಅಗತ್ಯವಿದೆ. ಪ್ರವಾಸಿಗರಿಗೆ ಇನ್ನೂ ಹೆಚ್ಚಿನ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕಾಗಿದೆ.

79.1 ಪ್ರಮುಖವಾಗಿ ಚಾಮುಂಡಿ ಬೆಟ್ಟ ಹತ್ತಲು ಈಗಿರುವ ಮೆಟ್ಟಿಲು ಗಳು ಶಿಥಿಲಗೊಂಡಿದ್ದು, ಉತ್ತಮ ಸ್ಥಿತಿಯಲ್ಲಿರುವುದಿಲ್ಲ. ಉತ್ತಮ ಮೆಟ್ಟಿಲುಗಳನ್ನು ನಿರ್ಮಿಸುವುದರ ಜೊತೆಗೆ ಅಲ್ಲಲ್ಲಿ ಕೆಲವು ಸೌಲಭ್ಯಗಳನ್ನು ಮತ್ತು ರೋಪ್‌ವೇ ಸಹ ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಗುವುದು.

80. **ಕಬಿನಿ ಡ್ಯಾಂ ಅಭಿವೃದ್ಧಿ :**

80.1 ಕಬಿನಿ ಜಲಾಶಯದ ಮುಂದೆ ಬೃಂದಾವನ ಮಾದರಿಯ ಒಂದು ಭವ್ಯ ಉದ್ಯಾನವನವನ್ನು ಅಭಿವೃದ್ಧಿಪಡಿಸಲು ಯೋಜನೆ ತಯಾರಿಸಿ ಆದಷ್ಟು ಬೇಗ ಅನುಷ್ಠಾನಕ್ಕೆ ತರಲಾಗುವುದು.

81. **ಕನ್ನಂಬಾಡಿ – 75**

81.1 ಈ ವರ್ಷ ಸರ್ ಎಂ. ವಿಶ್ವೇಶ್ವರಯ್ಯನವರು ಕಟ್ಟಿದ ಕನ್ನಂಬಾಡಿಗೆ 75 ವರ್ಷಗಳು ತುಂಬಲಿದೆ. ಈ ಒಂದು ಸಂದರ್ಭವನ್ನು ಕನ್ನಂಬಾಡಿ ಕಟ್ಟೆಯ ಮುಂದಿರುವ ಬೃಂದಾವನದಲ್ಲಿ ಒಂದು ವಿಶೇಷ ಕಾರ್ಯಕ್ರಮವನ್ನು ಏರ್ಪಡಿಸಿ ವಿಜೃಂಭಣೆಯಿಂದ ಕನ್ನಂಬಾಡಿಯ ಸೇವೆಯನ್ನು ಸ್ಮರಿಸಲಾಗುವುದು.

82. **ಕೊಡಗು ಅಭಿವೃದ್ಧಿಗೆ ವಿಶೇಷ ಗಮನ :**

82.1 ಕೊಡಗು ನಮ್ಮ ರಾಜ್ಯದ ಒಂದು ಹೆಮ್ಮೆಯ ಜಿಲ್ಲೆ ಪಶ್ಚಿಮ ಘಟ್ಟದ ಕೊನೆಯ ತುದಿಯಲ್ಲಿರುವ ಈ ಪುಟ್ಟ ಜಿಲ್ಲೆ ಕಾವೇರಿ ನದಿಯ ಉಗಮ ಸ್ಥಾನ ಸಹ ಇಲ್ಲಿ ಬಿದ್ದ ಮಳೆಯ ನೀರಿನಿಂದಲೇ ನಮ್ಮ ಕನ್ನಂಬಾಡಿ ಕಟ್ಟೆ ತುಂಬುತ್ತಿದೆ.

82.2 ಈ ಜಿಲ್ಲೆಯ ಅಭಿವೃದ್ಧಿಗೆ ಕಳೆದ ವರ್ಷ ರೂ.25 ಕೋಟಿಯ ವಿಶೇಷ ಯೋಜನೆ ಮಂಜೂರು ಮಾಡಲಾಗಿತ್ತು. ಈ ಜಿಲ್ಲೆಯ ಮೂಲಸೌಲಭ್ಯ ಅಭಿವೃದ್ಧಿ ಮತ್ತು ಪ್ರವಾಸೋದ್ಯಮ ಅಭಿವೃದ್ಧಿಗೆ ವಿಶೇಷ ಯೋಜನೆಗಳನ್ನು ತಯಾರಿಸಿ ಅನುಷ್ಠಾನಕ್ಕೆ ತರಲಾಗುವುದು.

83. **ಪ್ರವಾಸೋದ್ಯಮ :**

83.1 ರಾಜ್ಯದಲ್ಲಿ ಪ್ರಾದೇಶಿಕ ಪ್ರವಾಸೋದ್ಯಮಕ್ಕೆ ಹೆಚ್ಚು ಒತ್ತು ಕೊಡಲು ಎರಡು ವಿಶೇಷ ಕಾರ್ಯಪಡೆಗಳನ್ನು ರಚಿಸಲಾಗುವುದು. ಒಂದು ಮೈಸೂರು ಸುತ್ತಮುತ್ತಲಿನ ಪ್ರದೇಶಕ್ಕೆ ಮತ್ತೊಂದು ಶಿವಮೊಗ್ಗ ಸುತ್ತಮುತ್ತಲಿನ ಪ್ರದೇಶಕ್ಕೆ.

84. **ಮುಂದುವರೆಯುವ ಮಂಥನ :**

84.1 ನಾವು ಆಗಸ್ಟ್ 2008 ರಲ್ಲಿ ಮೊದಲನೆಯ ಮಂಥನವನ್ನು ಐ.ಐ.ಎಂ. ಬೆಂಗಳೂರಿನಲ್ಲಿ ಏರ್ಪಡಿಸಿದ್ದೆವು. ಇಲ್ಲಿ ಅಧಿಕಾರಿಗಳು ಮತ್ತು ಸಚಿವರು ತಮ್ಮ ವಿಚಾರಗಳನ್ನು ಮುಕ್ತವಾಗಿ

ಹಂಚಿಕೊಂಡರು ಮತ್ತು ರಾಜ್ಯದ ಸಮಗ್ರ ಅಭಿವೃದ್ಧಿಯ ಬಗ್ಗೆ ತಮ್ಮ ಆಲೋಚನೆಗಳನ್ನು ಮಂಡಿಸಿದ್ದರು. ಹಲವಾರು ಸಲಹೆಗಳು ಈ ಮಂಥನದಿಂದ ಹೊರ ಮೂಡಿ ಬಂದವು.

84.2 ಈ ಸಲಹೆಗಳ ಪೈಕಿ ಹಲವನ್ನು ಈಗಾಗಲೇ ಕಾರ್ಯರೂಪಕ್ಕೆ ತಂದಿರುತ್ತೇವೆ. ಇನ್ನುಳಿದ ಕೆಲವು ಸಲಹೆಗಳು ಸರ್ಕಾರದ ಪರಿಶೀಲನೆಯಲ್ಲಿವೆ.

84.3 ಈ ಮೊದಲನೆಯ ಮಂಥನದ ಅನುಭವದ ಹಿನ್ನೆಲೆಯಲ್ಲಿ, ಕಳೆದ ತಿಂಗಳು ಮಂಥನ–2ನ್ನು ಏರ್ಪಡಿಸಿದ್ದೆವು. ಈ ಮಂಥನ–2 ಇನ್ನೂ ಯಶಸ್ವಿಯಾಗಿ ನಡೆಯಿತು. ಅಧಿಕಾರಿಗಳು ಮತ್ತು ಸಚಿವರು ಎನ್ನುವ ಬೇಧ ಭಾವವಿಲ್ಲದೆ ಆಡಳಿತವನ್ನು ಚುರುಕುಗೊಳಿಸಲು, ಅಭಿವೃದ್ಧಿಯ ವೇಗವನ್ನು ಹೆಚ್ಚಿಸಲು ಮತ್ತು ಸಂಪನ್ಮೂಲ ಸಂಗ್ರಹಣೆ ಉತ್ತಮಗೊಳಿಸಲು ಹಲವಾರು ಸಲಹೆಗಳು ಈ ಮಂಥನದಲ್ಲಿ ಹೊರ ಬಿದ್ದಿವೆ. ಸರ್ಕಾರ ಈ ಎಲ್ಲಾ ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಿ ಪರಿಶೀಲಿಸಿ ಅನುಷ್ಠಾನಕ್ಕೆ ತರುವ ತಯಾರಿ ನಡೆಸಿದೆ.

84.4 ಇಂತಹ ವಿಚಾರ ಮಂಥನಗಳು ಆಗಾಗ ನಡೆಯುತ್ತಿರಬೇಕು. ಇಲಾಖೆಯ ಮಟ್ಟದಲ್ಲೂ ಈ ರೀತಿಯ ಚಿಂತನೆಗಳು ನಡೆಯಲು ಪ್ರಕ್ರಿಯೆ ಪ್ರಾರಂಭಿಸಲಾಗಿದೆ. ಈ ಕಾರಣದಿಂದಲೇ ನಾವು ಪ್ರತಿ ಮೂರು ತಿಂಗಳಿಗೊಮ್ಮೆ ಈ ರೀತಿಯಾದ ಮಂಥನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಿದ್ದೇವೆ.

85. ಅರಣ್ಯ ಇಲಾಖೆ :

85.1 ಕಳೆದ ವರ್ಷ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಮತ್ತು ಸಂರಕ್ಷಣೆಗೆ ಒಂದು ವಿಶೇಷ ಕಾರ್ಯಪಡೆ ರಚಿಸಲಾಗಿದೆ. ಈ ಕಾರ್ಯಪಡೆ ಸಾಕಷ್ಟು ಶ್ರಮವಹಿಸಿ ಹಲವು ನೂತನ ಯೋಜನೆಗಳನ್ನು ರೂಪಿಸಿ ಪಶ್ಚಿಮ ಘಟ್ಟಗಳ ಅಭಿವೃದ್ಧಿಗೆ ಮತ್ತು ಸಂರಕ್ಷಣೆಗೆ ಚಾಲನೆ ನೀಡಿದೆ.

85.2 ರಾಜ್ಯದಲ್ಲಿ ಶ್ರೀಗಂಧದ ಮರಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಸಲು ನೂತನ ಯೋಜನೆ ಜಾರಿ ಮಾಡಲಾಗಿದೆ.

85.3 ಅರಣ್ಯ ಪ್ರದೇಶದ ವಿಸ್ತರಣೆಗೆ ಮತ್ತು ಸಾಮಾಜಿಕ ಅರಣ್ಯ ಅಭಿವೃದ್ಧಿಗೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾರ್ಯಕ್ರಮದಡಿ ರೂ.200 ಕೋಟಿಗೂ ಹೆಚ್ಚು ಅನುದಾನವನ್ನು ಖರ್ಚು ಮಾಡಲು ಮೀಸಲಿಟ್ಟಿದೆ. ಅನುಷ್ಠಾನ ಸಹ ಪ್ರಾರಂಭವಾಗಿದೆ.

85.4 ಅದೇ ರೀತಿ NREGS ಮತ್ತು SDP ಯೋಜನೆ ಅಡಿಯಲ್ಲಿ ರಾಜ್ಯದ ಪೂರ್ವ ಜಿಲ್ಲೆಗಳಲ್ಲಿ ಸುಮಾರು 6400 ಹೆಕ್ಟೇರ್ ಪ್ರದೇಶದಲ್ಲಿ ಜೈವಿಕ ಇಂಧನ ನೆಡುತೋಪು ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.

85.5 ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ನಡೆಸುತ್ತಿರುವ ಗುತ್ತಿಗೆದಾರರಿಂದ ಅರಣ್ಯ ಅಭಿವೃದ್ಧಿಗೆ ತೆರಿಗೆ ವಸೂಲಿಗೆ ಅವಕಾಶ ಮಾಡಲಾಗಿದೆ.

85.6 ಆನೆಗಳ ಕಾಟದಿಂದ ಬಾಧಿತರಾದ ರೈತರ ಸಮಸ್ಯೆಗಳತ್ತ ಸಹ ವಿಶೇಷ ಗಮನ ಹರಿಸಲಾಗುತ್ತಿದೆ. ಆನೆಗಳು ರೈತರ ಜಮೀನುಗಳಿಗೆ ಬಾರದ ಹಾಗೆ ಕಂದಕಗಳನ್ನು ತೋಡುವುದು ಮತ್ತು ಸೋಲಾರ್ ವಿದ್ಯುತ್ ಬೇಲಿಗಳನ್ನು ಹಾಕುವ ಯೋಜನೆಯನ್ನು ಸಹ ಹಮ್ಮಿಕೊಂಡು ಅನುಷ್ಠಾನಕ್ಕೆ ತರಲಾಗುತ್ತಿದೆ.

85.7 ಅರಣ್ಯ ಇಲಾಖೆಗೆ ಅಗತ್ಯವಿರುವ ಹೊಸ ವಾಹನಗಳು ಮತ್ತು ಸಿಬ್ಬಂದಿಯನ್ನು ನಮ್ಮ ಸರ್ಕಾರ ಮಂಜೂರು ಮಾಡಿದೆ. ಹಲವಾರು ವರ್ಷಗಳಿಂದ ದಿನಗೂಲಿ ಮೇಲೆ ದುಡಿಯುತ್ತಿದ್ದ ಮಾವುತರು ಮತ್ತು ಕಾವಾಡಿಗರ ಸೇವೆಯನ್ನು ಸಕ್ರಮಗೊಳಿಸಲು ಕ್ರಮ ತೆಗೆದು ಕೊಂಡಿದ್ದೇವೆ.

85.8 ಅರಣ್ಯದಲ್ಲಿ ವಾಸಿಸುತ್ತಿರುವ ಗಿರಿಜನರ ಹಕ್ಕುಗಳನ್ನು ಕಾಪಾಡಲು ಕೇಂದ್ರ ಸರ್ಕಾರ ಹೊಸ ನೀತಿ ಮತ್ತು ಕಾನೂನನ್ನು ತಂದಿದ್ದು, ಅದರ ಅನುಷ್ಠಾನದಲ್ಲೂ ಸಹ ನಮ್ಮ ರಾಜ್ಯ ಮುಂಚೂಣಿಯಲ್ಲಿದೆ.

86. ಗಣಿಗಾರಿಕೆಗೆ ಹೊಸ ನೀತಿ :

86.1 ನಮ್ಮ ಸರ್ಕಾರ ಅಧಿಕಾರ ವಹಿಸಿಕೊಂಡ ತಕ್ಷಣ ನಾವು ಗಣಿಗಾರಿಕೆ ಬಗ್ಗೆ ಹೊಸ ನೀತಿಯನ್ನು ತರುವುದಾಗಿಯೂ, ಅಲ್ಲಿಯವರೆಗೆ ಯಾವುದೇ ಹೊಸ ಲೈಸೆನ್ಸ್ ನೀಡುವುದಿಲ್ಲ ಅಥವಾ ನವೀಕರಿಸುವುದಿಲ್ಲವೆಂದು ತೀರ್ಮಾನ ತೆಗೆದು ಕೊಂಡೆವು. ಇದರಿಂದಾಗಿ ಅನಧಿಕೃತವಾಗಿ ನಡೆಯುತ್ತಿದ್ದ ಗಣಿಗಾರಿಕೆಗೆ ಕಡಿವಾಣ ಹಾಕಲಾಯಿತು. ನಾವು ಆಶ್ವಾಸನೆ ನೀಡಿದಂತೆ ಡಿಸೆಂಬರ್ 2008 ರಲ್ಲಿ ಹೊಸ ಗಣಿ ನೀತಿಯನ್ನು ತರಲಾಯಿತು.

86.2 ಹೊಸ ಗಣಿ ನೀತಿಯಂತೆ ಮೌಲ್ಯವರ್ಧನೆಗೆ ಮಾತ್ರ ಕಬ್ಬಿಣದ ಅದಿರು ಗಣಿಗಾರಿಕೆಗೆ ಪ್ರೋತ್ಸಾಹ ನೀಡುತ್ತಿದ್ದೇವೆ. ಇದರಿಂದ ವಿದೇಶಕ್ಕೆ ರಫ್ತು ಆಗುತ್ತಿದ್ದ ಕಬ್ಬಿಣದ ಅದಿರು ನಮ್ಮಲ್ಲಿಯೇ ಕಬ್ಬಿಣ ಮತ್ತು ಉಕ್ಕು ತಯಾರಿಕೆಗೆ ಲಭ್ಯವಾಗುತ್ತಿದೆ. ನಮ್ಮ ಈ ನೀತಿಯಿಂದಾಗಿ ಹೊಸ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಗಳು ಸ್ಥಾಪನೆಯಾಗಲು ಅವಕಾಶವಾಗಿದೆ.

86.3 ನಾವು ಕೆಲವು ಜಿಲ್ಲೆಗಳಲ್ಲಿ ಉಕ್ಕು ವಲಯಗಳನ್ನು ಸ್ಥಾಪಿಸು ತ್ತಿದ್ದೇವೆ. ಇದರಿಂದ ರಾಜ್ಯದ ಯುವಕ ಯುವತಿಯರಿಗೆ ಉದ್ಯೋಗಾವಕಾಶಗಳು ಹೆಚ್ಚುವುದರ ಜೊತೆಗೆ ರಾಜ್ಯದ ಬೊಕ್ಕಸಕ್ಕೂ ಹೆಚ್ಚಿನ ಆದಾಯವನ್ನು ನಿರೀಕ್ಷಿಸಲಾಗಿದೆ.

86.4 ಲೋಕಾಯುಕ್ತರು ಅಕ್ರಮ ಗಣಿಗಾರಿಕೆ ಬಗ್ಗೆ ಈಗ ಒಂದು ವರದಿಯನ್ನು ಕೊಟ್ಟಿರುತ್ತಾರೆ. ಇನ್ನೂ ಒಂದು ವರದಿ ಬರಬೇಕಾಗಿದೆ. ಲೋಕಾಯುಕ್ತರು ತಮ್ಮ ವರದಿಯಲ್ಲಿ ನೀಡಿದ ಶಿಫಾರಸ್ಸುಗಳ ಬಗ್ಗೆ ಸರ್ಕಾರ ಈಗಾಗಲೇ ಕ್ರಮಗಳನ್ನು ಪ್ರಾರಂಭಿಸಿದೆ. ನಾವು ತೆಗೆದುಕೊಂಡ ಕ್ರಮಗಳು ಈ ರೀತಿ ಇವೆ.

86.5 ಅರಣ್ಯ ಇಲಾಖೆ ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸಲು ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದು, 37 ತಪ್ಪಿಸತ್ಥರ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಿ ಹಲವಾರು

ವಾಹನಗಳು ಮತ್ತು ನಿಯಮವಾಹಿರವಾಗಿ ತೆಗೆದ ಅದಿರನ್ನು ವಶಪಡಿಸಿಕೊಂಡಿರುತ್ತದೆ.

86.6 ಅನುಮತಿಯಿಲ್ಲದೆ ಅರಣ್ಯ ಭೂಮಿಯಲ್ಲಿ ಅದಿರು ಸಂಗ್ರಹಣೆ ಮಾಡಿದವರು ಮತ್ತು ರಸ್ತೆ ನಿರ್ಮಾಣ ಮಾಡಿರುವವರ ಮೇಲೆ ಸಹ ಅರಣ್ಯ ಇಲಾಖೆ ಪ್ರಕರಣಗಳನ್ನು ದಾಖಲು ಮಾಡಿರುತ್ತದೆ.

86.7 ಜೀವಿಶಾಸ್ತ್ರ ಪರಿಸರ ಇಲಾಖೆಯು, ಬಳ್ಳಾರಿ ಜಿಲ್ಲೆಯಲ್ಲಿ 48 ಗಣಿ ಮಾಲೀಕರ ಮೇಲೆ ಅನುಮತಿ ಪಡೆದ ಪ್ರಮಾಣಕ್ಕಿಂತಲೂ ಹೆಚ್ಚಿಗೆ ಅದಿರನ್ನು ತೆಗೆದ ಬಗ್ಗೆ ಕಿಮಿನಲ್ ಮೊಕದ್ದಮೆ ದಾಖಲು ಮಾಡಿರುತ್ತದೆ.

86.8 ರಾಷ್ಟ್ರದಲ್ಲೇ ಪ್ರಪ್ರಥಮ ಬಾರಿಗೆ ರಾಜ್ಯ ಸರ್ಕಾರ ಗಣಿ ಲೈಸೆನ್ಸ್ ನೀಡಿದ ಪ್ರತಿ ಹೆಕ್ಟೇರ್ ಕಂದಾಯ ಅಥವಾ ಪಟ್ಟಾ ಜಮೀನಿಗೆ ರೂ.84,000 ಪರಿಸರ ಸಂರಕ್ಷಣೆ ಶುಲ್ಕವನ್ನು ನಿಗದಿ ಮಾಡಿದೆ. ಅರಣ್ಯ ಇಲಾಖೆ ನಿಗದಿ ಮಾಡಿದ ಶುಲ್ಕದ ಜೊತೆಗೆ ಈ ಪರಿಸರ ಸಂರಕ್ಷಣೆಗೆ ಶುಲ್ಕವನ್ನು ಹೆಚ್ಚುವರಿಯಾಗಿ ವಸೂಲಿ ಮಾಡಲಾಗುತ್ತಿದೆ.

86.9 ಕರ್ನಾಟಕ ರಾಜ್ಯ ರಿಮೋಟ್ ಸೆನ್ಸಿಂಗ್ ಏಜೆನ್ಸಿ ಮುಖಾಂತರ ಅತ್ಯಾಧುನಿಕ ತಂತ್ರಜ್ಞಾನವನ್ನು ಉಪಯೋಗಿಸಿ ಸೆಟಲೈಟ್ ಮುಖಾಂತರ ಗಣಿ ಪ್ರದೇಶಗಳ ಸರ್ವೆ ಮಾಡಿಸಲಾಗುತ್ತಿದೆ. ಈ ವರದಿಯನ್ನು ಆಧರಿಸಿ ಸಹ ತಪ್ಪಿತಸ್ಥರೆಂದು ಕಂಡುಬಂದ ಗಣಿ ಮಾಲೀಕರ ವಿರುದ್ಧ ಕ್ರಮ ಪ್ರಾರಂಭಿಸಲಾಗುವುದು.

86.10 ಲೋಕಾಯುಕ್ತರ ವರದಿಯ ಪ್ರಕಾರ, ಒತ್ತುವರಿ ಮಾಡಿದ ಗಣಿ ಮಾಲೀಕರಿಗೆ ಒತ್ತುವರಿ ತೆರವು ಮಾಡಲು ಗಣಿ ಮತ್ತು ಭೂವಿಜ್ಞಾನ ಇಲಾಖೆ ನೋಟೀಸ್ ನೀಡಿರುತ್ತದೆ.

86.11 ಗಣಿ ಪರ್ಮಿಟ್‌ಗಳನ್ನು ಗಣಕೀಕರಣಗೊಳಿಸಿ ಬಾರ್ ಕೋಡ್ ಆಧಾರಿತ ವ್ಯವಸ್ಥೆ ಜಾರಿಗೆ ತರಲು ರಾಜ್ಯ ಸರ್ಕಾರ ಕ್ರಮ ಪ್ರಾರಂಭಿಸಿತ್ತು. ಆದರೆ, ಮಾನ್ಯ ಉಚ್ಚ ನ್ಯಾಯಾಲಯ ಈ ಕ್ರಮಕ್ಕೆ ತಡೆಯಾಜ್ಞೆ ನೀಡಿರುತ್ತದೆ.

86.12 ಮೇಲ್ನೋಟಕ್ಕೆ ತಪ್ಪಿತಸ್ಥರೆಂದು ಕಂಡುಬಂದ ಅಧಿಕಾರಿಗಳಿಗೆ ಕಾರಣ ಕೇಳುವ ನೋಟೀಸ್ ನೀಡಲಾಗಿರುತ್ತದೆ.

86.13 ನಮ್ಮ ರಾಜ್ಯದಲ್ಲಿ ಕಬ್ಬಿಣದ ಅದಿರಿನ ಜೊತೆಗೆ ಚಿನ್ನದ ಲೇಪವೂ ಬಹಳಷ್ಟಿರುವುದಾಗಿ ತಿಳಿದು ಬಂದಿದೆ. ಚಿನ್ನದ ಗಣಿ ಅಭಿವೃದ್ಧಿಗೂ ಸಹ ನಮ್ಮ ರಾಜ್ಯದಲ್ಲಿ ಸಾಕಷ್ಟು ಅವಕಾಶಗಳಿವೆ.

86.14 ಚಿನ್ನದ ಅನ್ವೇಷಣೆ, ಗಣಿಗಾರಿಕೆ ಮತ್ತು ಸಂಸ್ಕರಣೆಗೆ ಮುಂದಿನ ವರ್ಷಗಳಲ್ಲಿ ಹೆಚ್ಚಿನ ಪ್ರೋತ್ಸಾಹ ನೀಡಲಾಗುವುದು. ಈ ಮೂಲಕ ರಾಜ್ಯದ ಆದಾಯವನ್ನು ಹೆಚ್ಚಿಸಲು ಸಹ ಕ್ರಮ ತೆಗೆದುಕೊಳ್ಳಲಾಗುವುದು.

87. **ಗ್ಲೋಬಲ್ ಇನ್ವೆಸ್ಟರ್ಸ್ ಮೀಟ್ :**

87.1 ನಮ್ಮ ರಾಜ್ಯಕ್ಕೆ ಹೆಚ್ಚು ಬಂಡವಾಳ ಮತ್ತು ಕೈಗಾರಿಕೆಗಳನ್ನು ಆಕರ್ಷಿಸಲು ಕಳೆದ ಜನವರಿಯಲ್ಲಿ ಗ್ಲೋಬಲ್ ಇನ್ವೆಸ್ಟರ್ಸ್ ಮೀಟ್ ಏರ್ಪಡಿಸಬೇಕೆಂದು ಆಲೋಚಿಸಲಾಗಿತ್ತು.

87.2 ಆದರೆ ಜಾಗತಿಕ ಆರ್ಥಿಕ ಹಿನ್ನಡೆಯಿಂದಾಗಿ ಈ ಸಮಾವೇಶವನ್ನು ಮುಂದೂಡಲಾಯಿತು.

87.3 ಆದರೂ ಸಹ ಹಲವಾರು ಕೈಗಾರಿಕೋದ್ಯಮಿಗಳು ಮತ್ತು ಬಂಡವಾಳ ಹೂಡಿಕೆದಾರರು ಕರ್ನಾಟಕಕ್ಕೆ ಬರಲು ಆಸಕ್ತಿ ತೋರಿಸಿರುತ್ತಾರೆ. ಆದಕಾರಣ, ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಜನವರಿ 2010ರಲ್ಲಿ ಆಯೋಜಿಸಲು ತೀರ್ಮಾನಿಸಲಾಗಿದೆ.

87.4 ಇದಕ್ಕಾಗಿ ಪ್ರತಿ ಜಿಲ್ಲೆಯಲ್ಲೂ ಸಹ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗುತ್ತಿದೆ. ಈಗಾಗಲೇ ಸುಮಾರು ಹತ್ತು ಸಾವಿರ ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಅಧಿಸೂಚನೆ ಹೊರಡಿಸಲಾಗಿದೆ. ಕೈಗಾರಿಕೋದ್ಯಮಿಗಳು ರಾಜ್ಯಕ್ಕೆ ಬಂಡವಾಳ ಹೂಡಲು ಬಂದಾಗ ಅವರಿಗೆ ಅಗತ್ಯವಿರುವ ಜಮೀನು, ನೀರು, ವಿದ್ಯುತ್ ಮತ್ತಿತ್ತರ ಸೌಲಭ್ಯಗಳನ್ನು ಶೀಘ್ರವಾಗಿ ಒದಗಿಸಲು ಎಲ್ಲ ಸಿದ್ಧತೆಗಳನ್ನು ಮಾಡಲಾಗುತ್ತಿದೆ.

87.5 ಜೊತೆಗೆ ಖಾಸಗಿ ಸಹಭಾಗಿತ್ವದಲ್ಲಿ ರಸ್ತೆ, ಬಂದರು, ಕೈಗಾರಿಕಾ ವಲಯಗಳು, ಟೌನ್‌ಶಿಪ್‌ಗಳು, ಮಾರುಕಟ್ಟೆಗಳು ಇತ್ಯಾದಿ ಮೂಲ ಸೌಲಭ್ಯ ಯೋಜನೆಗಳನ್ನು ಸಿದ್ಧಪಡಿಸಿ ಆ ಸಂದರ್ಭದಲ್ಲಿ ಬಂಡವಾಳ ಹೂಡಿಕೆದಾರರ ಅವಗಾಹನೆಗೆ ಒದಗಿಸಲಾಗುವುದು.

88. ಬೆಂಕಿ ಅನಾಹುತದಲ್ಲಿ ನೊಂದವರಿಗೆ ಪರಿಹಾರ :

88.1 ಬಣವಿ, ಬೆಳೆ ಮತ್ತು ಗುಡಿಸಲು ಇತ್ಯಾದಿ ಆಸ್ತಿಗಳನ್ನು ಬೆಂಕಿ ಅನಾಹುತದಲ್ಲಿ ಕಳೆದುಕೊಂಡವರಿಗೆ ಪರಿಹಾರ ನೀಡಲು ಈಗಿನ ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಶಾಸಕರು, ಮಂತ್ರಿಗಳು ಮತ್ತು ನನಗೆ ಆಗಾಗ ಬೆಂಕಿ ಅನಾಹುತದಲ್ಲಿ ನೊಂದವರು ಅರ್ಜಿಗಳನ್ನು ನೀಡುತ್ತಲೇ ಇದ್ದಾರೆ. ಆದರೆ ಈಗಿರುವ ನಿಯಮಗಳಲ್ಲಿ ಅವಕಾಶವಿಲ್ಲದ ಕಾರಣ ಅವರೆಲ್ಲ ನಿರಾಶೆಯಾಗುತ್ತಿದ್ದಾರೆ. ಕಾರಣ, ಬೆಂಕಿಯಲ್ಲಿ ಆಸ್ತಿ ಪಾಸ್ತಿಗಳನ್ನು ಕಳೆದುಕೊಂಡವರಿಗೆ ಸ್ವಲ್ಪವಾದರೂ ಪರಿಹಾರ ನೀಡಲು ಹೊಸ ನಿಯಮಗಳನ್ನು ರಚಿಸಲಾಗುವುದು.

89. ಹಾವು ಕಡಿದು ಸತ್ತವರ ಕುಟುಂಬಗಳಿಗೆ ಪರಿಹಾರ :

89.1 ಈಗ ಹಾವು ಕಡಿದು ಸತ್ತವರ ಕುಟುಂಬಗಳಿಗೆ ಪರಿಹಾರವಾಗಿ ಕೇವಲ ರೂ. ಹತ್ತು ಸಾವಿರಗಳನ್ನು ರಾಷ್ಟ್ರೀಯ ಸಾಮಾಜಿಕ ಭದ್ರತಾ ಯೋಜನೆ ಅಡಿ ನೀಡಲಾಗುತ್ತಿದೆ. ಆದರೆ ಇದು ಬಹಳ ಕಡಿಮೆ ಎಂಬುದು ಎಲ್ಲರ ಅಭಿಪ್ರಾಯ. ಆದ್ದರಿಂದ ಹಾವು ಕಡಿದು ಸತ್ತ ಕೃಷಿ ಕಾರ್ಮಿಕರಿಗೆ ಮತ್ತು ಭೂ ರಹಿತರಿಗೆ ರಾಜ್ಯ ಸರ್ಕಾರದ ವತಿಯಿಂದ ಹೆಚ್ಚುವರಿ ರೂ. ಹತ್ತು ಸಾವಿರ ಪರಿಹಾರ ನೀಡಲು ಕ್ರಮ ತೆಗೆದು ಕೊಳ್ಳಲಾಗುತ್ತಿದೆ.

90. ಗೋವಾ ಚಳುವಳಿಯಲ್ಲಿ ಭಾಗವಹಿಸಿದವರಿಗೆ ಗೌರವಧನ :

90.1 1955–56ನೇ ಸಾಲಿನಲ್ಲಿ ಗೋವಾ ವಿಮೋಚನಾ ಚಳುವಳಿ ಯಲ್ಲಿ ಭಾಗವಹಿಸಿದ್ದ ಚಳುವಳಿಗಾರರಿಗೆ ಗೌರವಧನ

ಮಂಜೂರು ಮಾಡುವ ಯೋಜನೆ ಜನವರಿ 1991ರಲ್ಲಿ ಮಂಜೂರಾಗಿತ್ತು. ಈ ಯೋಜನೆಯಲ್ಲಿ ಸಾಕಷ್ಟು ದುರುಪಯೋಗವಾಗಿದೆ ಎಂದು ದೂರುಗಳು ಬಂದ ಹಿನ್ನೆಲೆಯಲ್ಲಿ ಏಪ್ರಿಲ್ 1995ರಲ್ಲಿ ಈ ಯೋಜನೆಯನ್ನು ವಾಪಸ್ ಪಡೆಯಲಾಗಿತ್ತು.

90.2 ಆದರೆ ಈ ಗೋವಾ ಚಳುವಳಿಯಲ್ಲಿ ಭಾಗವಹಿಸಿರುವ ನೈಜ ಹೋರಾಟಗಾರರಿಗೆ ಅನ್ಯಾಯವಾಗಬಾರದೆಂಬ ದೃಷ್ಟಿಯಿಂದ ನನ್ನ 2007–08ನೇ ಸಾಲಿನ ಆಯವ್ಯಯದಲ್ಲಿ ಅಂಥವರಿಗೆ ಮಾಸಿಕ ರೂ. 2,000 ಗೌರವಧನ ಮಂಜೂರು ಮಾಡುವ ಯೋಜನೆಯನ್ನು ಘೋಷಿಸಿದೆ. ನಂತರ ರಾಷ್ಟ್ರಪತಿ ಆಡಳಿತದ ಸಮಯದಲ್ಲಿ ಮಾರ್ಚ್ 2008ರಲ್ಲಿ ಕೆಲವು ಷರತ್ತುಗಳನ್ನು ಹಾಕಿ ಗೌರವಧನ ಮಂಜೂರು ಮಾಡುವ ಯೋಜನೆಯನ್ನು ಪುನಃ ಜಾರಿಗೆ ತರಲಾಯಿತು.

90.3 ಆದರೆ ಈ ಯೋಜನೆಯಲ್ಲಿ ವಿಧಿಸಿದ ಷರತ್ತುಗಳಿಂದಾಗಿ ಅರ್ಹರಾದ ಚಳುವಳಿಗಾರರಿಗೆ ಗೌರವಧನ ಮಂಜೂರು ಮಾಡಲು ಸಾಧ್ಯವಾಗುತ್ತಿಲ್ಲವೆಂಬ ಬಗ್ಗೆ ಸದನದಲ್ಲಿ ಚರ್ಚೆ ಯಾಗಿದೆ ಮತ್ತು ಚಳುವಳಿಗಾರರಿಂದಲೂ ಸಾಕಷ್ಟು ಮನವಿಗಳು ಬಂದಿವೆ.

90.4 ಈ ಎಲ್ಲ ಅಂಶಗಳನ್ನು ಪರಿಗಣಿಸಿ ಗೋವಾ ಪ್ರದೇಶಗಳನ್ನು ನಮ್ಮ ದೇಶದ ಅವಿಭಾಜ್ಯ ಅಂಗವಾಗಿ ಮಾಡಲು ಹೋರಾಟ ನಡೆಸಿದ ನೈಜ ಚಳುವಳಿಗಾರರಿಗೆ ಈಗಿರುವ ಯೋಜನೆಯನ್ನು ಸರಳೀಕರಣಗೊಳಿಸಿ, ಅವರಿಗೆ ಗೌರವಧನ ಮಂಜೂರು ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

91. KSFC ಸಾಲಗಳಿಗೆ ನೂತನ O.T.S. (One Time Settlement) ಯೋಜನೆ :

91.1 ಕರ್ನಾಟಕ ರಾಜ್ಯ ಹಣಕಾಸು ನಿಗಮ (KSFC)ದಲ್ಲಿ ಈಗಿರುವ O.T.S. ಸ್ಕೀಂ ಪ್ರಕಾರ ರೂ.5 ಲಕ್ಷದವರೆಗಿನ ಸಾಲಗಳ ಪ್ರಕರಣಗಳನ್ನು ಮಾತ್ರ ಇತ್ಯರ್ಥಪಡಿಸಲು ಸಾಧ್ಯ. ಆದರೆ ಕೆಲವು ವರ್ಷಗಳ ಹಿಂದೆ ನೂರಾರು ಚಿಕ್ಕ

ಕೈಗಾರಿಕೋದ್ಯಮಗಳು ಸಣ್ಣ ವಾಣಿಜ್ಯೋದ್ಯಮಿಗಳು ರೂ. 5 ಲಕ್ಷದಿಂದ ರೂ.10 ಲಕ್ಷದವರೆಗೆ ಸಾಲ ತೆಗೆದುಕೊಂಡು ಈಗ ಸುಸ್ತಿದಾರರಾಗಿ ಸುಸ್ತಿಬಡ್ಡಿ, ಚಕ್ರಬಡ್ಡಿ, ಎಲ್ಲ ಸೇರಿ ಅಸಲಿಗಿಂತ ಬಡ್ಡಿಯೇ ಹಲವು ಪಟ್ಟಾಗಿರುತ್ತದೆ. ಆರ್ಥಿಕ ಹಿನ್ನಡೆ ಯಿಂದಾಗಿ ಅವರ ಆಸ್ತಿ ಪಾಸ್ತಿಗಳು ಹರಾಜಾಗುವ ಪರಿಸ್ಥಿತಿಗೆ ಬಂದಿವೆ. ಈ ಎಲ್ಲ ಅಂಶಗಳನ್ನು ಪರಿಗಣಿಸಿ, ಈಗಿರುವ O.T.S.ನ್ನು ಮಾರ್ಪಡಿಸಿ, ರೂ.10 ಲಕ್ಷದವರೆಗಿನ ಸಾಲಗಳಿಗೆ ಇದನ್ನು ವಿಸ್ತರಿಸಲಾಗುವುದು. ಇದಲ್ಲದೆ ಇನ್ನೂ ಹೆಚ್ಚು ರಿಯಾಯಿತಿಯನ್ನು ನೀಡುವಂತೆ ಈ ಯೋಜನೆ ಯನ್ನು ರೂಪಿಸಲಾಗುವುದು.

92. ಸಮಗ್ರ ಕರ್ನಾಟಕವನ್ನು ಸಮೃದ್ಧ ಕರ್ನಾಟಕವನ್ನಾಗಿ ನಿರ್ಮಿಸುವ ಹಾದಿಯಲ್ಲಿ ನಮ್ಮ 2ನೆಯ ಮುಂಗಡ ಪತ್ರ ಮುಂದುವರಿದ ಹೆಜ್ಜೆಯಾಗಿದೆ. ಕಳೆದೊಂದು ವರ್ಷದಲ್ಲಿ ರೂಪಿಸಿ ಅನುಷ್ಠಾನಗೊಳಿ ಸಿರುವ ಕಾರ್ಯಕ್ರಮಗಳು ಫಲ ನೀಡಲಾರಂಭಿಸಿವೆ. ಎರಡನೇ ವರ್ಷದಲ್ಲಿ ಅಭಿವೃದ್ಧಿ ಪ್ರಕ್ರಿಯೆಯ ವೇಗವನ್ನು ಮತ್ತಷ್ಟು ಹೆಚ್ಚಿಸಿ ಅಭಿವೃದ್ಧಿ ಕಾರ್ಯಕ್ರಮಗಳ ಫಲ ಸಮಾಜದ ಸಮಸ್ತ ವರ್ಗಗಳಿಗೆ ತಲುಪುವಂತೆ ನೋಡಿಕೊಳ್ಳಲು ನಾವು ಬದ್ಧರಾಗಿದ್ದೇವೆ.

93. ರಾಜ್ಯದ ಹಿಂದುಳಿದ ಪ್ರದೇಶಗಳು ಹಾಗೂ ದುರ್ಬಲ ವರ್ಗಗಳ ಕಲ್ಯಾಣಕ್ಕಾಗಿ ವಿಶೇಷ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾ ಗುತ್ತಿದೆ. ಜಾಗತಿಕ ಆರ್ಥಿಕ ಹಿನ್ನಡೆಯ ನಡುವೆಯೂ ರಾಜ್ಯ ಅಭಿವೃದ್ಧಿ ಪಥದಲ್ಲಿ ಮುನ್ನಡೆಯುವಂತೆ ಜಾಗರೂಕತೆ ವಹಿಸಲಾಗಿದೆ.

94. ಅಭಿವೃದ್ಧಿ ಕಾರ್ಯಕ್ರಮಗಳ ಫಲ ಸಮಾಜದ ಸಮಸ್ತ ವರ್ಗಗಳಿಗೆ ದೊರೆಯುವಂತೆ, ಜೊತೆಗೆ ರಾಜ್ಯದ ಎಲ್ಲಾ ಪ್ರದೇಶಗಳ ಸಮತೋಲಿತ ಅಭಿವೃದ್ಧಿ ಸಾಧಿಸಲು ನಿಮ್ಮೆಲ್ಲರ ಸಹಕಾರ ಕೋರಿ, 2009–10ನೇ ಸಾಲಿನ ಮುಂಗಡ ಪತ್ರಕ್ಕೆ ಈ ಸದನ ಅನುಮೋದನೆ ನೀಡುವಂತೆ ಮನವಿ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

* * *

(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದರು)

(ಗೊಂದಲ)

ಅಧ್ಯಕ್ಷರು : ಯಾವಾಗ ನೋಡಿದರೂ ರೂಲ್ 69 ಎಂದು ಹೇಳುತ್ತೀರಿ. ಬೆಳಿಗ್ಗೆ ಸದನ ಪ್ರಾರಂಭವಾದಾಗಲೂ ರೂಲ್ 69. ನಾನು ಬೆಳಿಗ್ಗೆಯೇ ಹೇಳಿದ್ದೇನೆ. ಯಾರಿಗೂ ಅವಕಾಶ ಸಿಗುವುದಿಲ್ಲವೆಂದು ಬೆಳಿಗ್ಗೆಯೇ ಹೇಳಿದ್ದೇನೆ. ಮತ್ತೆ ಅದೇ ಹಠ ಮಾಡುತ್ತಿದ್ದೀರಿ ಇದು ಒಳ್ಳೆಯದಲ್ಲ.

(ಗೊಂದಲ)

ಅಧ್ಯಕ್ಷರು : ಇದು ಸರಿಯಲ್ಲ. ಇವರು 5 ನಿಮಿಷ ಮಾತನಾಡಿದರೆ ಎಲ್ಲಾ ಪ್ರಾಬ್ಲಮ್ solve ಆಗಿಬಿಡುತ್ತದೆಯೇ? ಹೈದರಾಬಾದ್-ಕರ್ನಾಟಕದ ಪ್ರಾಬ್ಲಮ್. ಇಷ್ಟು ವರ್ಷಗಳ ಕಾಲ ನೀವು ಹೈದರಾಬಾದ್-ಕರ್ನಾಟಕದ ವಿಷಯ ಮಾತನಾಡಿಲ್ಲವೇ? ಯಾವತ್ತೂ ನಿಮಗೆ ಅವಕಾಶವೇ ಸಿಗಲಿಲ್ಲವೇ? ಈಗ 5 ನಿಮಿಷ ಮಾತನಾಡಿದರೆ problem solve ಆಗಿಬಿಡುತ್ತದೆಯೇ? ಆ ರೀತಿ ಆಗುವುದು ಇದ್ದರೆ ನೀವು ಹಠ ಮಾಡಿ. ಇದು ಸರಿಯಲ್ಲ. ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಉತ್ತರ ಕೊಡುವಾಗ ಈ ರೀತಿ ಮಾಡುವುದು ಸರಿಯಲ್ಲ. ತಾವೆಲ್ಲಾ ಬಾವಿಗೆ ಬಂದು ಈ ರೀತಿ ಮಾತನಾಡುವುದು ಸರಿಯಲ್ಲ. . . . .

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ನಾನು ಮಾತನಾಡುವುದನ್ನು ರೆಕಾರ್ಡ್ ಮಾಡಿ ಸರ್. ನಾನು ಓದಿದ ಕಾಪಿಗಳನ್ನು ಮಾಧ್ಯಮದವರಿಗೆ ಸಹ ಕೊಡೋಣ.

(ಗೊಂದಲ)

ಅಧ್ಯಕ್ಷರು : ತಮಗೆ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಕೊಟ್ಟರೂ ಈ ರೀತಿ ಮಾಡುತ್ತಿದ್ದೀರಿ. ಕೊನೆಗೆ ಕೆಲವರಿಗೆ 5 ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಲಿಲ್ಲ ಎನ್ನುವ ಕಾರಣಕ್ಕೆ ತಾವೆಲ್ಲಾ ಬಾವಿಗೆ ಬಂದಿರುವುದನ್ನು ನೋಡಿದರೆ ನಮಗೆ ಅರ್ಥವಾಗುತ್ತಿಲ್ಲ. ಆಮೇಲೆ ಸ್ಪಷ್ಟೀಕರಣ ಕೇಳಲು ತಮಗೆ ಅವಕಾಶ ಕೊಡುತ್ತೇನೆ ಎಂದರೂ ತಾವು ಕೇಳುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದ ಮೇಲೆ ನಿಮಗೆ

ಅವಕಾಶ ಕೊಡುತ್ತೇನೆಂದು ಹೇಳುತ್ತಿದ್ದರೂ ಕೇಳುತ್ತಿಲ್ಲ. ಇದು ಸದನದ ಗೌರವಕ್ಕೆ ಧಕ್ಕೆ ತರುವಂಥಾದ್ದು. ಈ ರೀತಿ ಮಾಡಿದರೆ ಸದನದ ಗೌರವಕ್ಕೆ ಧಕ್ಕೆ ಬರುತ್ತದೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಸದಸ್ಯರು ತಮ್ಮ ಮಾತನ್ನು ಮೀರಿ ವರ್ತನೆ ಮಾಡುತ್ತಿದ್ದಾರೆ. ಅವರನ್ನು ಸದನದಿಂದ ಹೊರಗೆ ಹಾಕಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಹಾಕಿ ಹೊರಗಡೆ ನೊಡೋಣ. ನೀವು ಏನು ಸರ್ವಾಧಿಕಾರಿಗಳೇ?

(ಗೊಂದಲ)

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳ ಉತ್ತರ ಮುಗಿಯಿತು.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಏನು ಭಾಷಣ ಮಾಡಬೇಕೆಂದಿದ್ದೆ, ಅದರ ಪ್ರತಿಯನ್ನು ಕೊಡುತ್ತೇನೆ. ನಾನು ಇಲ್ಲಿ ಓದಿದ್ದೇನೆ ಎಂದು ರೆಕಾರ್ಡ್ ಮಾಡಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಆ ರೀತಿ ಅದು ರೆಕಾರ್ಡ್‌ಗೆ ಹೋಗುವುದಕ್ಕೆ ಆಗುವುದಿಲ್ಲ. ಸದನ ಆರ್ಡರ್‌ನಲ್ಲಿ ಇಲ್ಲ. House is not in order.

(ಗೊಂದಲ)

ಅಧ್ಯಕ್ಷರು : Not in order ಮಾಡಿದವರು ಯಾರು?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಇವೆಲ್ಲವನ್ನೂ ಸದನದ ದಾಖಲೆಗೋಸ್ಕರ ನಾನು ಕೊಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ರೆಕಾರ್ಡ್‌ಗೆ ಸೇರಿಸಿಕೊಳ್ಳಿ.

(ಗೊಂದಲ)

ಅಧ್ಯಕ್ಷರು : ನಾನು ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ;

31–03–2010ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1 ರಿಂದ 28ಕ್ಕೆ ಸಂಬಂಧಿಸಿದಂತೆ ಸಂದಾಯ ವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲನ್ನು ಮಂಜೂರು ಮಾಡುವುದು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ 01–ಕೃಷಿ ಮತ್ತು ತೋಟಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕೃಷಿ ಮತ್ತು ತೋಟಗಾರಿಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,70,028.69 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,500.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 02– ಪಶುಸಂಗೋಪನೆ ಮತ್ತು ಮೀನುಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪಶುಸಂಗೋಪನೆ ಮತ್ತು ಮೀನುಗಾರಿಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 68,739.54 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 7,338.50 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 07– ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,56,720.63 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,56,490.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 14 – ಕಂದಾಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಂದಾಯ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,13,623.08 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,020.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 20 – ಲೋಕೋಪಯೋಗಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಲೋಕೋಪಯೋಗಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,30,630.14 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,39,572.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 10 – ಸಮಾಜ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಮಾಜ ಕಲ್ಯಾಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,98,336.06 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 24,477.33 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 11 –ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,58,576.16 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 7,210.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 13 – ಆಹಾರ ಮತ್ತು ನಾಗರಿಕ ಸರಬರಾಜು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆಹಾರ ಮತ್ತು ನಾಗರಿಕ ಸರಬರಾಜು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 80,896.85 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,800.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 21 – ಜಲಸಂಪನ್ಮೂಲ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಜಲಸಂಪನ್ಮೂಲ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 33,890.93 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 4,50,478.97 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 23 – ಕಾರ್ಮಿಕ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾರ್ಮಿಕ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 36,272.81 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 300.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 09 – ಸಹಕಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಹಕಾರ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 32,932.45 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,330.50 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 16 – ವಸತಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಸತಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 73,813.68 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 25,119.23 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 17 – ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಶಿಕ್ಷಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 8,70,187.80 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 26,093.15 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 22 – ಆರೋಗ್ಯ ಮತ್ತು ಕುಟುಂಬ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರೋಗ್ಯ ಮತ್ತು ಕುಟುಂಬ ಕಲ್ಯಾಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,94,648.60 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 35,696.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 05 – ಒಳಾಡಳಿತ ಮತ್ತು ಸಾರಿಗೆ ಇಲಾಖೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಒಳಾಡಳಿತ ಮತ್ತು ಸಾರಿಗೆ ಇಲಾಖೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,22,349.83 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 35,235.67 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 18 – ವಾಣಿಜ್ಯ ಮತ್ತು ಕೈಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾಣಿಜ್ಯ ಮತ್ತು ಕೈಗಾರಿಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,34,787.21 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,642.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 24 – ಇಂಧನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಇಂಧನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,43,940.67 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 76,200.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 12 – ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-03-2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 20,745.86 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 11,100.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 06 – ಮೂಲಭೂತ ಸೌಕರ್ಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-03-2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮೂಲಭೂತ ಸೌಕರ್ಯ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,058.30 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 41,533.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 15-- ಮಾಹಿತಿ ತಂತ್ರಜ್ಞಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-03-2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಾಹಿತಿ ತಂತ್ರಜ್ಞಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 3,407.70 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,660.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 27 – ಕಾನೂನು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾನೂನು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 25,933.80 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 28 – ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 7,165.39 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 26 – ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 42,477.21 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 04 – ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 37,361.43 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 03 – ಆರ್ಥಿಕ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರ್ಥಿಕ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 5,58,141.44 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,037.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 19 – ನಗರಾಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನಗರಾಭಿವೃದ್ಧಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 4,36,761.41 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,28,666.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 08 – ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 49,481.27 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 312.60 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 25 – ಕನ್ನಡ ಮತ್ತು ಸಂಸ್ಕೃತಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–03–2010 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕನ್ನಡ ಮತ್ತು ಸಂಸ್ಕೃತಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 19,470.35 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,181.64 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

(ಪ್ರಸ್ತಾವ ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳಿಗೆ ಅನುಮೋದನೆ ನೀಡಲಾಯಿತು)

6. 2009–10ನೇ ಸಾಲಿನ ಪೂರಕ ಅಂದಾಜುಗಳ (ಒಂದನೇ ಕಂತು) ಮಂಡನೆ ಹಾಗೂ ಅಂಗೀಕಾರ :

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 2009–10ನೇ ಸಾಲಿನ ಪೂರಕ ಅಂದಾಜುಗಳ (ಒಂದನೇ ಕಂತು) ಬಗ್ಗೆ ಬೇಡಿಕೆಗಳ ಪ್ರಸ್ತಾವಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ".

ಅಧ್ಯಕ್ಷರು : "2009–10ನೇ ಸಾಲಿನ ಪೂರಕ ಅಂದಾಜುಗಳ (ಒಂದನೇ ಕಂತು) ಬೇಡಿಕೆಗಳ ಪ್ರಸ್ತಾವಗಳನ್ನು" ಸಭೆಯ ಮುಂದೆ ಮಂಡಿಸುವುದು.

ಪ್ರಸ್ತಾವವನ್ನು ಮಂಡಿಸಲಾಯಿತು.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 2009–10ನೇ ಸಾಲಿನ ಪೂರಕ ಅಂದಾಜುಗಳಿಗೆ (ಒಂದನೇ ಕಂತು) ಈ ಸದನವು ಅಂಗೀಕಾರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : "2009–10ನೇ ಸಾಲಿನ ಪೂರಕ ಅಂದಾಜುಗಳ (ಒಂದನೇ ಕಂತು) ಬೇಡಿಕೆಗಳ ಪ್ರಸ್ತಾವವನ್ನು" ಸಭೆಯನ್ನು ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ;

ದಿನಾಂಕ : 31–03–2010ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1 ರಿಂದ 5 ಹಾಗೂ 7 ರಿಂದ 15 ಹಾಗೂ 17 ರಿಂದ 28 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಒಟ್ಟು ಮೊಬಲಗು ಸೇರಿ ಪೂರಕ ಅಂದಾಜುಗಳ (ಒಂದನೇ ಕಂತು) ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯ ಮಂಜೂರು ಮಾಡುವುದು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಪೂರಕ ಅಂದಾಜು (ಒಂದನೇ ಕಂತು) ಗಳನ್ನು ಮಂಜೂರು ಮಾಡಲಾಯಿತು

(ಅನುಬಂಧ–8)

(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದ ವಿರೋಧ ಪಕ್ಷದ ಸದಸ್ಯರು ತಮ್ಮ ಸ್ಥಾನಗಳಿಗೆ ತೆರಳಿದರು)